ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 16 ಏಪ್ರಿಲ್ 19, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಪ. ಬಂಗಾಲ, ಕೇರಳದ ಗೆಲುವಿಗೆ ಬೆಂಗಳೂರಿನ ನಲಿವು

ಸಿ. ಪಿ. ಐ. (ಎಂ) ಸಿ. ಪಿ. ಐ. ಜಂಟಿ ವಿಜಯೋತ್ಸವ

ಬೆಂಗಳೂರು ನಗರದ ಎಡಪಕ್ಷಗಳ ಬೆಂಬಲಿಗರು, ಹಿತೈಷಿಗಳು ಮತ್ತು ಪ್ರಜಾಪ್ರಭುತ್ವವಾದಿಗಳು ಪಶ್ಚಿಮ ಬಂಗಾಳ ಮತ್ತು ಕೇರಳ ವಿಧಾನ ಸಭಾ ಚುನಾವಣೆಗಳಲ್ಲಿ ಎಡ, ಪ್ರಜಾಪ್ರಭುತ್ವವಾದೀ, ಪ್ರಗತಿಪರ ಶಕ್ತಿಗಳ ಚಾರಿತ್ರಿಕ ವಿಜಯೋತ್ಸವವನ್ನು ಏಪ್ರಿಲ್ 15ರಂದು ಉತ್ಸಾಹದಿಂದ ಆಚರಿಸಿದರು. ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಅಂಗಪಕ್ಷವಾಗಿದ್ದು ಎರಡುಮಂತ್ರಿಗಳನ್ನು ಹೊಂದಿರುವ ಜನತಾ ಪಕ್ಷದ ರಾಜ್ಯ ಘಟಕ ಈ ವಿಜಯೋತ್ಸವ ನಡೆಸಲು ಒಪ್ಪಿಕೊಂಡಿದ್ದರೂ ಅದರ ಮುಖಂಡರ ಮೀನ-ಮೇಷದಿಂದಾಗಿ ಅವರು ಭಾಗವಹಿಸದೆ ಕೇವಲ ಸಿ.ಪಿ.ಐ.(ಎಂ)ಮತ್ತು ಸಿ.ಪಿ.ಐ. ಜೊತೆಗೂಡಿ ಈ ಸಾರ್ವಜನಿಕ ಸಭೆಯನ್ನು ಹೆಚ್ಚಿನ ಸಿದ್ಧತೆಯಿಲ್ಲದೆ ಏರ್ಪಡಿಸಬೇಕಾಗಿ ಬಂತು. ಆದರೂ ಸಭೆ ನಡೆದ ವರದಾಚಾರ್ ಕಲಾ ಕ್ಷೇತ್ರ ಕಿಕ್ಕಿರಿದು ತುಂಬಿದ್ದು ನಗರದ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನದ ಬೆಂಬಲಿಗರಲ್ಲಿ ಈಎರಡು ವಿಜಯಗಳಿಂದ ಹೊಸ ನಿರೀಕ್ಷೆ ಮೂಡಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಪಿ.ಐ. [ಎಂ] ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಸೂರ್ಯನಾರಾಯಣ ರಾವ್ ಕಾಂಗ್ರೆಸ್ [ಐ] ನ, ಮುಖ್ಯವಾಗಿ ಆ ಪಕ್ಷದ ಅಧ್ಯಕ್ಷ ರಾಜೀವ್ ಗಾಂಧಿಯವರ ಅಬ್ಬರದ, ಬಿರುಸಿನ, ಅಪಪ್ರಚಾರ, ಅವಕ್ಕೆ ಬೂರ್ಜ್ವಾ ಪತ್ರಿಕೆಗಳ ಹೊಗಳು ಭಟ್ಟರ ಪೂರ್ಣ ಬೆಂಬಲವಿದ್ದರೂ ಕಾಂಗ್ರೆಸ್ [ಐ] ಸೋಲನ್ನಪ್ಪಲು ಯಾವ ಮ್ಯಾಜಿಕ್ಕೂ ಕಾರಣವಲ್ಲ. ಎಡ ಪಕ್ಷಗಳು ಕಳೆದ ಎರಡು ವರ್ಷಗಳಲ್ಲಿ ದುಡಿಯುವ ಜನ ವಿಭಾಗಗಳ ಸಮಸ್ಯೆಗಳಿಗಾಗಿ ನಡೆಸಿದ ಹೋರಾಟಗಳು, ಬಾಶಾನು ತೀರ್ಪನ್ನು ಬೆಂಬಲಿಸಿ ಸಿ.ಪಿ.ಐ. [ಎಂ] ಕೋಮುವಾದದ ವಿರುದ್ಧ ತಳೆದ ದೃಢವಾದ ನೀತಿ ಬದ್ಧ ನಿಲುವು, ದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ತಳೆದ ದೃಢ ನಿಲುವಿನಿಂದಾಗಿ ಈ ಅವಿರೋಧ ವಿಜಯ ಸಾಧ್ಯವಾಯಿತು ಎಂದರು. ತನ್ನ ಒಬ್ಬ ಪ್ರಮುಖ ಮುಖಂಡನ ಕೊಮುವಾದೀ ನಿಲುವನ್ನು ಖಂಡಿಸದೆ, ಪಂಜಾಬಿನಲ್ಲಿ ಭಯೋತ್ಪಾದಕರ ವಿರುದ್ಧ ದೃಢ ನಿಲುವು ತಳೆಯದೆ, ರಾಜ್ಯದಲ್ಲೂ ಜನತೆಯ ಹಿತಗಳನ್ನು ಜನತಾ ಪಕ್ಷವೂ ಕಡೆಗಣಿಸುತ್ತಿರುವುದನ್ನು ಪ್ರಸ್ತಾಪಿಸಿದ ಕಾಂ. ಸೂರಿಯವರು ಕಾಂಗ್ರೆಸ್ [ಐ] ಗೆ ಪರ್ಯಾಯ ಕೆಲವು ಪಕ್ಷಗಳು ಹೊಂದಾಣಿಕೆ ಮಾತ್ರದಿಂದಲೇ ಸೃಷ್ಟಿಯಾಗುವುದಿಲ್ಲ, ಜನತೆಯ ಐಕ್ಯಹೋರಾಟಗಳ ಮೂಲಕ ಮಾತ್ರವೇ ಅದು ಸಾಧ್ಯ ಎಂದು ಒತ್ತಿ ಹೇಳಿದರು. ಪಶ್ಚಿಮ ಬಂಗಾಳದ ಎಡರಂಗ ಹಾಗೂ ಕೇರಳದ ಎಲ್. ಡಿ. ಎಫ್. ನ ಕಾರ್ಯಕರ್ತರನ್ನು ಅಭಿನಂದಿಸುತ್ತಾ ಕಾಂ. ಸೂರಿಯವರು ನಮ್ಮ ರಾಜ್ಯದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಕೂಡಾ ಅವರು ತೋರಿದ ದಾರಿಯಲ್ಲಿ ಮುಂದುವರಿಯುವ ಪಣ ತೊಡುತ್ತವೆ ಎಂದರು. ಮುಖ್ಯವಾಗಿ ಸಿ.ಪಿ.ಐ. ಮತ್ತು ಸಿ.ಪಿ.ಐ. [ಎಂ], ಸಿ.ಐ.ಟಿ.ಯು. ಮತ್ತು ಸಿ.ಐ.ಟಿ.ಯು.ಸಿ. ದುಡಿಯುವ ಜನಗಳ ಆರ್ಥಿಕ ಬೇಡಿಕೆಗಳಿಂದ ಆರಂಭಿಸಿ ಐಕ್ಯ ಮತ್ತು ದೃಢ ಹೋರಾಟಗಳ ಮೂಲಕ ಅವರ ಹೋರಾಟಗಳನ್ನು ರಾಜಕೀಯ ಬೇಡಿಕೆಗಳ ಮಟ್ಟಕ್ಕೇರಿಸಿ ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನವನ್ನು ಬಲಗೊಳಿಸಬೇಕೆಂದು, ಈ ಮೂಲಕ ಜನತಾ ಪಕ್ಷವನ್ನು ಜನಹಿತದ ಸರಿ ದಾರಿಗೆತರುವಂತಾಗಬೇಕೆಂದು ಅವರು ಕರೆನೀಡಿದರು.

ಸಿ.ಪಿ.ಐ.ನ ಕೇಂದ್ರ ಕಾರ್ಯಕಾರಿ ಮಂಡಳಿಯ ಕಾರ್ಯದರ್ಶಿ ರಾಜಶೇಖರ ರೆಡ್ಡಿಯವರು ಈ ಎರಡು ರಂಗಗಳ ಮುಖಂಡತ್ವವಹಿಸಿ ಎಡ ಪಕ್ಷಗಳ ಐಕ್ಯತೆಯನ್ನು ಬೆಸೆದು ವಿಜಯ ಸಾಧಿಸಿದುದಕ್ಕೆ ಸಿ.ಪಿ.ಐ.(ಎಂ)ನ್ನು ಅಭಿನಂದಿಸುತ್ತಾ ಪಶ್ಚಿಮ ಬಂಗಾಳದಲ್ಲಿ ಸತತವಾಗಿ ಮೂರನೇ ಬಾರಿ ವಿಜಯ ಎಡ ರಂಗ ಅಧಿಕಾರಕ್ಕೆಬಂದಿರುವುದು ಅದೃಷ್ಟವಶಾತ್ ಅಲ್ಲ, ತನ್ನ ಕೆಲಸಗಳಿಂದಾಗಿ ಮತ್ತು ಅದರ ಪ್ರತಿಯೊಂದು ವಿಜಯವೂ ಮೇಲಿನ ಹಂತಕ್ಕೇರಲು ಮೆಟ್ಟಿಲು ಎಂದೂ, ಕೇರಳದ ವಿಜಯ ಹಿಂದಿನವುಗಳಿಗಿಂತ ಗುಣಾತ್ಮಕವಾಗಿ ಮೇಲ್ಮಟ್ಟದ ವಿಜಯ ಎಂದು ಬಣ್ಣಿಸಿದರು. ಹಲವು ಹಗರಣಗಳ ದುರ್ನಾತದಿಂದ ನಾರುತ್ತಿರುವ ಕಾಂಗ್ರೆಸ್(ಐ)ಗೆ ರಾಷ್ಟ್ರೀಯ ಮಟ್ಟದಲ್ಲಿ ಸಮರ್ಥವಾದ, ಎಡ ಪಕ್ಷಗಳು ಕೇಂದ್ರಬಿಂದುವಾಗಿರುವ ಪರ್ಯಾಯವನ್ನೂ ರಚಿಸುವ ಚಾರಿತ್ರಿಕ ಹೊಣೆ ನಮ್ಮ ಮೇಲಿದೆ ಎಂದು ಅವರು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿ.ಪಿ.ಐ [ಎಂ] ರಾಜ್ಯ ಸೆಕ್ರೆಟೇರಿಯೆಟ್ ಸದಸ್ಯ ಸಿ.ನಂಜುಂಡಪ್ಪನವರು ಈ ಎರಡು ರಂಗಗಳ ವಿಜಯ, ಆಮೇಲೆ ಜ್ಯೋತಿ ಬಸುರವರ ಕರೆ, ಏಪ್ರಿಲ್ 25 ರಂದು ನಡೆಯಲಿರುವ ಏಳು ಕಾಂಗ್ರೆಸ್ ವಿರೋಧಿ ಮುಖ್ಯಮಂತ್ರಿಗಳ ಸಭೆ ದೇಶದ ರಾಜಕೀಯದ ಮೇಲೆ ಬೀರಲಿರುವ ಪರಿಣಾಮಗಳ ಬಗ್ಗೆ ವಿವರಿಸಿ ನಮ್ಮ ದೇಶದ ಕ್ರಾಂತಿಯನ್ನು ತಡೆಯಲು ಸಾಮ್ರಾಜ್ಯಶಾಹಿ ಶಕ್ತಿಗಳು ಸರ್ವ ಪ್ರಯತ್ನ ನಡೆಸುತ್ತಿವೆಯೆಂಬುದನ್ನು ಎಡ ಪಕ್ಷಗಳ ಕಾರ್ಯಕರ್ತರು ಗಮನದಲ್ಲಿಟ್ಟುಕೊಂಡು ದುಡಿಯಬೇಕೆಂದು ಹೇಳಿದರು. ಆರಂಭದಲ್ಲಿ ಸಿ.ಪಿ.ಐ.ನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಎಂ. ಸಿ.ವೆಂಕಟರಾಮು ಅವರು ಸ್ವಾಗತ ಭಾಷಣ ಮಾಡಿದರು.

ಕಾಂಗ್ರೆಸ್ (ಐ) ಕೈಯಲ್ಲಿ ಪ್ರಜಾಪ್ರಭುತ್ವ ಸುಭದ್ರವಾಗಿರಲು ಸಾಧ್ಯವಿಲ್ಲ

"ಕಾಂಗ್ರೆಸ್‌ನಲ್ಲಿ ಒಳಜಗಳ ಬಹಳ ಗಂಭೀರ ರೂಪತಳೆಯುತ್ತಿದೆ. ಅನೇಕ ರಾಜ್ಯಗಳಲ್ಲಿ ಹೊಡೆದಾಟದ ರೂಪಕ್ಕೆ ಹೋಗುತ್ತಿದೆ. ಪ.ಬಂಗಾಳದಲ್ಲಿ ಇದರ ಉದಾರಣೆಯನ್ನು ನೋಡಬಹುದು. ಕೇಂದ್ರದಲ್ಲಿ ಇದು ತೀವ್ರ ಸ್ವರೂಪವನ್ನು ತಳೆಯುತ್ತಿದೆ. ಕಾಂಗ್ರೆಸ್ ಇಂದು ಬಿಕ್ಕಟ್ಟಿನಲ್ಲಿದೆ. ತನ್ನ ಒಳಗೇ ಪ್ರಜಾಪ್ರಭುತ್ವವಿಲ್ಲದ ಪಕ್ಷ ಕಾಂಗ್ರೆಸ್ [ಐ] ಆ ಪಕ್ಷದ ಎಲ್ಲಾ ಪದಾಧಿಕಾರಿಗಳೂ ಕೇವಲ ನೇಮಕಗೊಂಡವರು.ಒಂದೇ ಪಕ್ಷ ಆಡಳಿತದಲ್ಲಿರುವಾಗಲೂ ಮುಖ್ಯಮಂತ್ರಿಗಳನ್ನು ಮನಬಂದಂತೆ ಬದಲಾಯಿಸುತ್ತಾರೆ.

ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ರಕ್ಷಣಾ ಉದ್ಯೋಗಿಗಳ ಒಕ್ಕೂಟದಲ್ಲಿ ಭಾಗವಹಿಸಲು ಬೆಂಗಳೂರಿಗೆ ಬಂದಿದ್ದ ಸಿ.ಪಿ.ಐ.[ಎಂ] ಪಾಲಿಟ್ ಬ್ಯೂರೊ ಸದಸ್ಯ ಕಾಂ. ಸಮರ ಮುಖರ್ಜಿಯವರು ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಟಿಯನ್ನುದ್ದೇಶಿಸಿ ಮಾತನಾಡುತ್ತಾ ಹೀಗೆ ಹೇಳಿದರು.

ಇಂತಹ ಪಕ್ಷದ ಕೈಯಲ್ಲಿ ನಮ್ಮ

ಕಾಂ. ಸಮರಮುಖರ್ಜಿ

ದೇಶದ ಪ್ರಜಾಪ್ರಭುತ್ವ ಸುಭದ್ರವಾಗಿರಲು ಸಾಧ್ಯವಿಲ್ಲ" ಇಂತಹ ಸನ್ನಿವೇಶದಲ್ಲಿ ನಮ್ಮ ದೇಶದ ರಕ್ಷಣೆ ವಿದೇಶಿ ಮಧ್ಯ ಪ್ರವೇಶಕ್ಕೆ ಹೆಚ್ಚು ಹೆಚ್ಚು ಒಳಗಾಗುತ್ತಿದೆ. ಅದರಲ್ಲಿಯೇ ಖಾಸಗಿ ಬಹುರಾಷ್ಟ್ರೀಯ ಕಂಪನಿಗಳಿಂದ ಕೊಳ್ಳುವಿಕೆ ಹೆಚ್ಚುತ್ತಿದೆ. ಇತ್ತೀಚಿಗೆ ಬಹಿರಂಗಗೊಂಡಿರುವ ಸಬ್‌ಮೇರಿನ್ ದುರ್ವ್ಯವಹಾರ ಇದನ್ನು ಸಾಬೀತುಗೊಳಿಸುತ್ತದೆ. ಈ ಸಬ್‌ಮೇರಿನ್‌ಗಳಲ್ಲಿ ಹಲವಾರು ದೋಷಗಳಿರುವುದನ್ನು ವಿಶ್ವದ ವಿವಿಧ ದೇಶಗಳ ತಂತ್ರಜ್ಞರು ಎತ್ತಿ ತೋರಿಸುತ್ತಿದ್ದಾರೆ. ಅಂತಹ ಸಬ್‌ಮೇರಿನ್‌ಗಳನ್ನು ಭಾರತ ಸರ್ಕಾರ ಕೊಂಡಿರುವಾಗ ಏಜೆಂಟ್ ನೊಬ್ಬನಿಗೆ ಕೇವಲ ಕಮೀಷನ್ ರೂಪದಲ್ಲಿ 30 ಕೋಟಿ ರೂ ದಕ್ಕಿದೆ. ಇಂತಹ ಅವ್ಯವಹಾರಗಳು ಅನೇಕ ಕಾಲದಿಂದ ನಡೆಯುತ್ತಿದೆ.

ಆದರೆ ಈ ಎಲ್ಲಾ ವ್ಯವಹಾರಗಳನ್ನು ದೇಶದ ಎಲ್ಲಾ ಪತ್ರಿಕೆಗಳು ಚರ್ಚಿಸುತ್ತಿದ್ದರೂ ಲೋಕ ಸಭೆಯಲ್ಲಿ ಮಾತ್ರ ಈ ವಿಷಯಗಳನ್ನು ಚರ್ಚಿಸಲು ಅವಕಾಶ ನೀಡುತ್ತಿಲ್ಲ.

ನಮ್ಮ ದೇಶದ ವಿದೇಶಾಂಗ ನೀತಿಯ ಮೇಲೆ ಒತ್ತಡಗಳು ಹೆಚ್ಚುತ್ತಿವೆ.

[8ನೇ ಪುಟ ನೋಡಿ]

ಮೇ ದಿನವನ್ನು ಜಂಟಿಯಾಗಿ ಆಚರಿಸಿ

ಹಿಂದಿನ ವರ್ಷ ಮೇ ಶತಮಾನೋತ್ಸವವನ್ನು ಆಚರಿಸಲಾಯಿತು. ಇದು ಕಾರ್ಮಿಕ ರಂಗದ ಐಕ್ಯತೆ ಬೆಳೆಯುತ್ತಿರುವುದನ್ನು ಸೂಚಿಸುತ್ತದೆ.

ಈ ಐಕ್ಯತೆಯ ಭಾವನೆ ಹೆಚ್ಚು ಬಲಗೊಳ್ಳಬೇಕೆಂದು ಈ ವರ್ಷ ಕೂಡಾ ಮೇ ದಿನವನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಜಂಟಿಯಾಗಿ ಆಚರಿಸಬೇಕೆಂದು ಇಚ್ಛಿಸುತ್ತೇವೆ. ಸಿ.ಐ.ಟಿ.ಯು. ಹಾಗೂ ಎ.ಐ.ಟಿ.ಯು.ಸಿ.ಗೆ ಸೇರಿದ ಎಲ್ಲಾ ರಾಜ್ಯಸಮಿತಿಗಳೂ, ಕಾರ್ಮಿಕ ಸಂಘಗಳೂ ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಿ.ಐ.ಟಿ.ಯು.ಕಾರ್ಯದರ್ಶಿಗಳಲ್ಲೊಬ್ಬರಾದ ಕಾ|| ನೃಸಿಂಘ ಚಕ್ರವರ್ತಿ ಹಾಗೂ ಎ.ಐ.ಟಿ.ಯು.ಸಿ.ನ ಕಾರ್ಯದರ್ಶಿ ಹೋಮಿದಾಜಿ ತಿಳಿಸಿದ್ದಾರೆ.

ಹಾಲಿನ ಬೆಲೆ ಏರಿಕೆಗೆ ಸಿ.ಪಿ.ಐ. [ಎಂ] ವಿರೋಧ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಜಿಲ್ಲಾ ಕಾರ್ಯದರ್ಶಿಗಳಾದ ಎನ್. ಸೂರ್ಯನಾರಾಯಣ ರಾವ್‌ರವರು ಕೆಳಕಂಡ ಹೇಳಿಕೆಯನ್ನು ನೀಡಿದ್ದಾರೆ.

ಹಾಲಿನ ಬೆಲೆಯನ್ನು ಲೀಟರಿಗೆ 50 ಪೈಸೆಯಷ್ಟು ಏರಿಸಿರುವುದನ್ನು ವಿರೋಧಿಸುತ್ತದೆ.

ಜನತಾ ಸರ್ಕಾರ ಮಕ್ಕಳಿಗೆ, ರೋಗಿಗಳಿಗೆ ಮತ್ತು ಬಡವರಿಗೆ ಹಾಲನ್ನು ಕಡಿಮೆ ಬೆಲೆಯಲ್ಲಿ ಒದಗಿಸುವುದನ್ನು ಬಿಟ್ಟು 50 ಪೈಸೆ ಬೆಲೆ ಏರಿಸುವುದು ಸರಿಯಿಲ್ಲ.

ಈ ಕೂಡಲೇ ಏರಿಸಿರುವ ಬೆಲೆಯನ್ನು ರದ್ದು ಮಾಡದಿದ್ದಲ್ಲಿ ಸಿ. ಪಿ. ಐ. (ಎಂ) ಇತರ ಪ್ರಗತಿಪರ ಸಂಘಟನೆಗಳ ಜೊತೆಗೂಡಿ ಚಳುವಳಿ ನಡೆಸಬೇಕಾಗುತ್ತದೆ.

ಕೇರಳದ ಚುನಾವಣೆಗಳು - ಒಂದು ಅಪೂರ್ವ ಅನುಭವ

ಮಾರ್ಚ್ 23 ರಂದು ನಡೆದ ಕೇರಳ ಚುನಾವಣೆಯು ದೇಶದ ರಾಜಕೀಯದಲ್ಲಿ ತುಂಬ ಮಹತ್ವದ್ದು. ಅತ್ಯಂತ ಕುತೂಹಲವನ್ನು ಮೂಡಿಸಿದ್ದ ಈ ಚುನಾವಣೆಯನ್ನು ವೀಕ್ಷಿಸಿ ಅನುಭವ ಪಡೆಯುವ ಆಸಕ್ತಿಯಿಂದ ನಾನು ಕಣ್ಣಾನೂರು ಜಿಲ್ಲೆಯ ಪೆರಿಂಗಳ, ಕಣ್ಣಾನೂರು, ತಲಚೇರಿ, ಇಡಕಾಡ್ಡು, ಹಳಿಕೋಡು. ತಳಿಪರಂಬು, ಕೂತುಪರಂಬು ವಿಧಾನ ಸಭಾ ಕ್ಷೇತ್ರಗಳಿಗೆ ಭೇಟಿ ನೀಡಿದಾಗ ನನಗಾದ ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ಪ್ರಚಾರದ ವೈಖರಿ

ಚುನಾವಣೆ ಘೋಷಣೆಯ ಕ್ಷಣವೇ ಪ್ರಚಾರ ಕಾರ್ಯ ಪ್ರಾರಂಭಗೊಂಡಿತೆಂದು ತಿಳಿಯಬೇಕು. ಎಡ ಪ್ರಜಾಸತ್ತಾತ್ಮಕ ರಂಗದ ಪಕ್ಷಗಳ ಮುಖಂಡರು ಕಾರ್ಯಕರ್ತರನ್ನೊಳಗೊಂಡ ಚುನಾವಣಾ ಸಮಿತಿ ರಚನೆಗೊಳ್ಳುತ್ತದೆ. ಅಭ್ಯರ್ಥಿಯ ಘೋಷಣೆಯಾದ ಕೂಡಲೇ ಕಾರ್ಯ ಪ್ರವೃತ್ತರಾಗುತ್ತಾರೆ. ಈ ಸಮಿತಿಯಲ್ಲೂ ಹಲವು ಉಪ ಸಮಿತಿಗಳುಂಟು ಒಂದು ಮತಯಾಚಿಸುವ ತಂಡ, ಗೋಡೆ ಬರಹ, ಪೋಸ್ಟರ್ ಬ್ಯಾನರ್ ವ್ಯವಸ್ಥೆ, ಚುನಾವಣಾ ನಿಧಿ ಸಂಗ್ರಹ, ಮುಂತಾದವುಗಳು. ಜನರ ಪರಿಚಯದ ಆಧಾರದಲ್ಲಿ ಪ್ರತಿ ತಂಡದ ಪ್ರಚಾರದ ಪ್ರದೇಶ ಚರ್ಚಿಸುವ ಅಂಶಗಳು. ಆಡಳಿತ ನಡೆಸಿದ ಸರ್ಕಾರದ ವೈಫಲ್ಯಗಳು ತಾವು ಜನತೆ ಮುಂದಿಡುವ ಪ್ರಣಾಳಿಕೆ, ತಾವು ಅವರಿಗಾಗಿ ನಡೆಸಿದ ಹೋರಾಟ ಮುಂತಾದವನ್ನೂ ಸವಿವರವಾಗಿ ಮತದಾರನೊಡನೆ ಚರ್ಚಿಸಲಾಗುತ್ತದೆ. ಮತದಾರನು ಕೂಡ ಚರ್ಚೆಯಲ್ಲಿ ತುಂಬ ಆಸಕ್ತಿ ವಹಿಸಿ ಪಾಲ್ಗೊಳ್ಳುತ್ತಾನೆ. ತನ್ನ ಅನುಮಾನಗಳನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಹೀಗೆ ಚರ್ಚಿಸಿ ಹೊರಬಂದ ಕೂಡಲೇ ಮತ್ತೊಂದು ಪಕ್ಷ ಅದೇ ಮತದಾರನನ್ನು ಸಂಧಿಸುತ್ತದೆ. ಹಿಂದೆ ಬಂದು ಹೋದ ತಂಡ ಮತ್ತೆ ಬಂದು ಚರ್ಚಿಸುತ್ತದೆ. ಈ ರೀತಿಯಲ್ಲಿ ಪ್ರತಿ ಮತದಾರನನ್ನು ಚುನಾವಣೆಯ ಕೊನೆ ಗಳಿಗೆಯವರೆಗೆ ಕನಿಷ್ಠ 5-6 ಬಾರಿ

ಎನ್. ರಾಜಣ್ಣ

ಯಾದರೂ ಈ ಭೇಟಿ ಕಾರ್ಯ ಸತತವಾಗಿ ನಡೆವೇ ಇರುತ್ತದೆ. ಸಮಯದ ಅಡ್ಡಿ ಎಂಬುದಿಲ್ಲ ರಾತ್ರಿ 12-1 ಗಂಟೆಯಾದರೂ ನಡೆವೇಇರುತ್ತದೆ. ಪ್ರತಿ ಮತದಾರನೂ ಯಾವುದಾದರು ಒಂದು ಪಕ್ಷಕ್ಕೆ ತನ್ನ ನಿಷ್ಠೆ ಹೊಂದಿರುತ್ತಾನೆ. ಕಾರ್ಯ ಕರ್ತರು ಕೂಡ ತನ್ನನ್ನು ತಾನು ಆಪಕ್ಷಕ್ಕೆ ಸಮರ್ಪಿಸಿಕೊಂಡಿರುತ್ತಾನೆ.

ಪತ್ರಿಕೆಗಳ ಪಾತ್ರ

ಕೇರಳದಲ್ಲಿರುವ ಬಹುತೇಕ ಪಕ್ಷಗಳು ತಮ್ಮ ಪಕ್ಷಗಳ ನಿಲುವುಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ತಿಳಿಸಲು ಪತ್ರಿಕೆಗಳು ಮಾಧ್ಯಮವಾಗಿವೆ. ಸಿ.ಪಿ.ಐ. (ಎಂ) (ದೇಶಾಭಿಮಾನಿ), ಸಿ.ಪಿ.ಐ. (ಜನಯುಗಂ), ಜನತಾ (ಮಾತೃಭೂಮಿ), ಕಾಂಗ್ರೆಸ್ (ಐ) (ಮಲಯಾಳಂ ಮನೋರಮ), ಕೇರಳ ಕಾಂಗ್ರೆಸ್ (ದೀಪಿಕ), ಎಸ್. ಆರ್.ಪಿ. (ಕೇರಳ ಕೌಮುದಿ), ಮುಸ್ಲಿಂಲೀಗ್ (ಚಂದ್ರಿಕ), ಸುನ್ನಿ ಗುಂಪು [ಸಿರಾಜ್], ಜಮಾತೆ ಇಸ್ಲಾಮಿ [ಪ್ರಬೋದನಾ], ಎಂ. ವಿ. ರಾಘವನ್ ಸಿ.ಎಂ.ಪಿ. [ಕೇರಳ ಮಣ್ಣು] ಪ್ರಮುಖವಾದವುಗಳು. ಮಲೆಯಾಳಂ ಮನೋರಮ ದೇಶದಲ್ಲಿಯೇ ಅತ್ಯಂತ ಹೆಚ್ಚು ಪ್ರಸಾರ ವುಳ್ಳ ದಿನ ಪತ್ರಿಕೆಯಾಗಿದ್ದು 3 ಲಕ್ಷದಷ್ಟು ಪತ್ರಿಕೆ ಮಾರಾಟವಾಗುತ್ತದೆ. 2ನೇ ಅತ್ಯಂತ ದೊಡ್ಡ ಪ್ರಸಾರವುಳ್ಳ ಪತ್ರಿಕೆ ದೇಶಾಭಿಮಾನಿ. ಮನೋರಮ ಪತ್ರಿಕೆ ಚುನಾವಣೆಯ ಪ್ರಾರಂಭದಿಂದಲೇ ಯು.ಡಿ.ಎಫ್. ಕಡೆ ಜನತೆಯ ಒಲವಿದೆ. ಅಧಿಕಾರಕ್ಕೆ ಬರುತ್ತದೆ. ಕಾಂಗ್ರೆಸ್ ಮಿತ್ರ ಪಕ್ಷದ ಬಹಿರಂಗ ಸಭೆಗಳು ಹೇಳಿಕೆಗಳನ್ನು ಜನರ ಮಧ್ಯೆ ದೊಡ್ಡ ಪ್ರಚಾರ ನೀಡಿ ಒಂದು ರೀತಿಯ ಭ್ರಮೆಯನ್ನೇ ಸೃಷ್ಟಿಸಿತು. ಚುನಾವಣೆಯ ಫಲಿತಾಂಶ ಈ ಸುಳ್ಳು ಪ್ರಚಾರವನ್ನು ಬಯಲು ಮಾಡಿದೆ. ಈ ಕಾರಣಕ್ಕಾಗಿ ಮನೋರಮ ಪತ್ರಿಕೆಯ ಪ್ರತಿಗಳನ್ನು ಬೀದಿಬದಿಯ ಬಸ್ ನಿಲ್ದಾಣ, ಸಾರ್ವಜನಿಕ ಸ್ಥಳಗಳಲ್ಲಿ ಸುಟ್ಟು, ಅರ್ಧ ಭಾಗವನ್ನು ತೂಗು ಹಾಕುವುದರ ಮೂಲಕ ತಮ್ಮ ಪ್ರತಿಭಟನೆಯನ್ನು ಜನ ವ್ಯಕ್ತ ಪಡಿಸಿದ್ದರು.

ವಿಜಯೋತ್ಸವ ಸಂಭ್ರಮ

ಚುನಾವಣೆಯ ನಂತರ ಜನರಲ್ಲಿ ಫಲಿತಾಂಶದ ಬಗ್ಗೆ ಕಂಡು ಬರುವ ಆಸಕ್ತಿ ಕುತೂಹಲ ಉನ್ನತವಾದದ್ದು. ರೇಡಿಯೋಗಳಲ್ಲಿ ಪ್ರತಿ 20 ನಿಮಿಷಕ್ಕೊಂದು ಬಾರಿ ಪ್ರಸಾರಗೊಳ್ಳುವ ಸುದ್ದಿಯನ್ನು ಕೇಳಲು ಜನರು ರೇಡಿಯೋ ಮುಂದೆ ಗುಂಪುಗಟ್ಟುತ್ತಾರೆ. ರೇಡಿಯೋ ಇರುವ ಮನೆಗಳಂತೂ ಅಂದು ಕಿಕ್ಕಿರಿದ ಜನ ಸಂದಣಿಯಿಂದ ಕೂಡಿರುತ್ತದೆ. ಫಲಿತಾಂಶ ಪ್ರಕಟಣೆಯಲ್ಲಿ ಕಾಣುವ ವೈಶಿಷ್ಟ್ಯವೆಂದರೆ ಮತ ಮಂಡಲವಾರು ಎಣಿಕೆಯ ಪ್ರಕಟಣೆ ನೀಡುವುದರಿಂದ ತಮ್ಮ ಅಭ್ಯರ್ಥಿಯ ಜಯದ ಹಾದಿಯನ್ನು ಅಲ್ಲೇ ಗುರುತಿಸುತ್ತಾರೆ. ಫಲಿತಾಂಶದಲ್ಲಿ ಮತಘಟ್ಟವಾರು ವಿವಿಧ ಪಕ್ಷಗಳು ಪಡೆದ ಮತಗಳ ವಿವರ ದೊರೆಯುವುದರಿಂದ ಆಯಾ ಪಕ್ಷಗಳು ತಮ್ಮ ಪ್ರದೇಶದಲ್ಲಿ ಹೊಂದಿರುವ ಜನ ಬೆಂಬಲ ಮನ್ನಣೆಯನ್ನು ಗುರುತಿಸುತ್ತಾರೆ. ತಮ್ಮ ಅಭ್ಯರ್ಥಿ ಜಯಗಳಿಸಿದ್ದಾರೆ ಎಂಬ ಸುದ್ದಿ ಪ್ರಕಟಗೊಂಡ ಕೂಡಲೇ ಪಟಾಕಿ, ಸಿಡಿ ಮದ್ದು, ಬಾಣ ಬಿರುಸುಗಳು ಮುಗಿಲು ಮುಟ್ಟುತ್ತವೆ. ಸದ್ದು ಕೇಳಿದ ಮಕ್ಕಳಾದಿಯಾಗಿ ರಂಗದ ಬೆಂಬಲಿಗರು ಪಕ್ಷದ ಕಛೇರಿಯಲ್ಲಿ ಸೇರಿ ಸಮಾಲೋಚನೆ ನಡೆಸಿ ವಿಜಯೋತ್ಸವ ರ್‍ಯಾಲಿ ಹೊರಡುತ್ತದೆ. ತಮ್ಮ ಪಕ್ಷದ ಬಗ್ಗೆ ಸೋತ ಪಕ್ಷದವರು ಮಾಡಿದ ಆರೋಪಗಳನ್ನು ಅಪಹಾಸ್ಯ ಮಾಡುತ್ತಾ ವ್ಯಂಗ್ಯವಾದ ಪ್ರತ್ಯುತ್ತರವನ್ನು ಧ್ವನಿವರ್ಧಕ ಪ್ರಕಟಿಸುತ್ತದೆ. ಎಡ ಮತ್ತು ಪ್ರಜಾಸತ್ತಾತ್ಮಕ ರಂಗವನ್ನು ಜಯಗಳಿಸುವುದರ ಮೂಲಕ ಕೇರಳವನ್ನು ರಕ್ಷಿಸಿದ ಮತದಾರ ಬಾಂಧವರಿಗೆ ಸಾವಿರ ಸಾವಿರ ಅಭಿನಂದನೆಗಳನ್ನು ಸಲ್ಲಿಸಲಾಗುತ್ತದೆ. ವಿವಿಧ ಭಂಗಿಗಳಲ್ಲಿ ಹಾಡುತ್ತಾ, ಕುಣಿಯುತ್ತಾ ಸಾಗುವ ಈ ರ್‍ಯಾಲಿ ತಮ್ಮ ವಿರೋಧ ಪಕ್ಷದ ಕಾರ್ಯಕರ್ತರ ಮುಖಂಡರ ಮನೆ ಮುಂದೆ ಹಾಯ್ದು ಹೋಗುವಾಗಲಂತೂ ಅವರ ಮುಖದ ಮೇಲಿನ ನೀರು ಇಳಿಯುವಂತೆ ಘೋಷಣೆಗಳು ಕೇಳಿಬರುತ್ತವೆ ಉದಾ. (ಪ್ಲೊಟು ಪೊಯಿ ಪೊಟುಪೊಯಿ ಬಿರಿಯರ್ ನಿಲೀಗ್ ಪೊಟು ಪೊಯಿ,ಬಷಿರೇ, ಬಷಿರೇ, ಹೋ. ಅಭಿವಾದ್ಯಂಗಳ ಅಭಿವಾದ್ಯಂಗಳ ಆಹಿರವಾಯಿರ ಅಭಿವಾದ್ಯಂಗಳ) ಅರಬ್ ಅಂತರಾಷ್ಟ್ರೀಯ ವಾಣಿಜ್ಯೋದ್ಯಮಿಯ ಮನೆ ಮುಂದೆ ಮೊಳಗಿದ ಘೋಷಣೆ ಇದು. ಮಹಿಳೆಯರು ಸಣ್ಣ ಮಕ್ಕಳು ರ್‍ಯಾಲಿಗೆ ತಮ್ಮ ವಿರೋಚಿತವಾದ ಸ್ವಾಗತ ನೀಡಿ ಕೆಂಪು ವರ್ಣದ ಹೂಮಳೆಗರೆದು ಈ ವಿಜಯೋತ್ಸವದಲ್ಲಿ ಪಾಲ್ಗೊಳುತ್ತಾರೆ.

ಪ್ರತಿ ಹಳ್ಳಿಯಲ್ಲಿ ಕಛೇರಿಗಳು

ಪ್ರತಿ ಗ್ರಾಮದಲ್ಲಿಯೂ ರಾಜಕೀಯ ಪಕ್ಷಗಳ ಕಛೇರಿ ಇರುತ್ತದೆ. ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಈ ಕಾರ್ಯಾಲಯಗಳಿಗೆ ಮೊದಲ ಭೇಟಿ ನೀಡುತ್ತಾರೆ. ಒಬ್ಬ ಮುಸ್ಲಿಂ ಮಹಿ

(6ನೇ ಪುಟ ನೋಡಿ)

ಕರುಣಾಕರನ್ ಎಂಬ ಮಾಂಸದಂಗಡಿಯ ಮಾಲೀಕ

ಚುನಾವಣೆಯ ಮೊದಲ ಜವಾಬ್ದಾರಿ ವಹಿಸಿಕೊಳ್ಳುವುದು ಇಲ್ಲಿಯ ಗೋಡೆಗಳು ರಂಗದ ಅಭ್ಯರ್ಥಿಗೆ ಮತಯಾಚನೆಗಾಗಿ ಗೋಡೆಯ ಸ್ಥಳ ಕಾದಿರಿಸಲಾಗುತ್ತದೆ.

ವಿವಿಧ ಬಣ್ಣ ಬಣ್ಣದ ಸೊಗಸಾದ ಕೈಬರಹದ ಬರವಣಿಗೆ ಜನತೆಯನ್ನು ವಿಚಾರದ ಒರೆಗಲ್ಲಿಗೆ ಹಚ್ಚುವ ವ್ಯಂಗಚಿತ್ರಗಳು ಪಾದಚಾರಿಗಳನ್ನೂ ತಡೆದು ನಿಲ್ಲಿಸಿ ಪತ್ರಿಕೆಯ ಸಮಾಚಾರ ಓದುವಂತೆ ಅದರ ಕಲಾ ಪ್ರತಿಮೆಯನ್ನು ತೋರ್ಪಡಿಸಿ ನಗೆಯಾಡಿಸಿ ಮನ ಒಲಿಸುತ್ತವೆ. ಕಾದಿರಿಸಿದ ಗೋಡೆ ಬಗ್ಗೆ ಎಡು ಪಕ್ಷಗಳಲ್ಲಿ ವಿವಾದ ಉಂಟಾದರೆ ಪೋಲೀಸ್ ಮಧ್ಯ ಪ್ರವೇಶದಿಂದ ಇಬ್ಭಾಗ ಮಾಡಿ ಬಗೆ ಹರಿಸಲಾಗುವುದು. ಅದಕ್ಕೂ ಸಮ್ಮತಿಸದಿದ್ದರೆ ನಿಷೇಧಿಸಲಾಗುವುದು.

ಕರುಣಾಕರನ್ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದ ಹಲವಾರು ಘಟನೆಗಳನ್ನು ಜನರಿಗೆ ನೆನಪಿಸುವ ಅಂತಹ ಚಿತ್ರಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

1 ಕರುಣಾಕರನ್‌ರವರು ಮಾಂ ದಂಗಡಿಯಲ್ಲಿ ಮಾಂಸ ಮಾರಲು ಕುಳಿತಿರುವರು. ಕೇರಳ ಎಂಬ ಮಾಂಸದ ತುಂಡನ್ನು ಅವರ ರಂಗದ ಇತರೇ ಸಣ್ಣ ಪುಟ್ಟ ಪಕ್ಷಗಳಾದ ಎನ್.ಡಿ.ಪಿ. ಎಸ್.ಎನ್.ಡಿ.ಪಿ. ಸಿ.ಎಂ.ಪಿ., ಮುಸ್ಲಿಂಲೀಗ್, ಕೇರಳ ಕಾಂಗ್ರೆಸ್(ಮಣಿ), ಕೇರಳ ಕಾಂಗ್ರೆಸ್(ಜೋಸೆಫ್,) ಮುಂತಾದವರು ಬ್ಯಾಗ್ ಹಿಡಿದು ನಿಂತು ಮಾಂಸದಲ್ಲಿ ತಮ್ಮ ಪಾಲನ್ನು ಕೇಳುತ್ತಿದ್ದಾರೆ. ಮಾಂಸ ಕತ್ತರಿಸುವ ಮರದ ಕೆಳಗೆ ಎಂ.ವಿ. ರಾಘವನ್ ಎಂಬ ನಾಯಿ ಕುಳಿತಿದೆ. ಮಾಂಸ ಕತ್ತರಿಸುವಾಗ ಯಾವುದಾದರೂ ಮೂಳೆ ಚೂರು ಬಿದ್ದರೆ ತಿನ್ನಲು ಕಾದಿದೆ.

2 ತಂಗಮಣಿ ಎಂಬ ಸ್ಥಳದಲ್ಲಿ ಮಾನಭಂಗಕ್ಕೊಳಗಾದ ಮಹಿಳೆಯರು ಚುನಾವಣಾ ಪ್ರಚಾರಕ್ಕೆಂದು ಬರುತ್ತಿರುವ ಕರುಣಾಕರನ್ ತಂಡ ನೋಡಿ ಓಡುತ್ತಿದ್ದಾರೆ. ಅವರೊಂದಿಗೆ ಮನೆ ನಾಯಿ ಕೂಡ. ಈ ಘಟನೆ ಓಡುತ್ತದೆ. ವಿಧಾನಸಭೆಯಲ್ಲಿ ಪ್ರಸ್ತಾಪವಾದಾಗ ಮುಖ್ಯಮಂತ್ರಿ ಕರುಣಾಕರನ್‌ರವರ ಇಂತಹ ಘಟನೆಯೇ ನಡೆದಿಲ್ಲ ಯಾವ ತಂಗಮಣಿ? ಆಧಾರ, ಸಾಕ್ಷಿ ಏನಿದೆ? ಎಂದು ಕೇಳುತ್ತಿರುವುದು ಮತ್ತೊಂದು.

3 ಕರುಣಾಕರನ್‌ಮನೆ ದೇವರು ಗುರುವಾಯೂರಪ್ಪನ ವಜ್ರದ ಕಿರೀಟ ಕಳವಾಗಿದೆ. ದರುಶನ ಮಾಡಲು ಬಂದ ಕರುಣಾಕರನ್‌ರನ್ನು ಉದ್ದೇಶಿಸಿ ಗುರುವಾಯೂರಪ್ಪ ತಡೆದು ನೀನು ನನ್ನ ನಿಜವಾದ ಭಕ್ತನಾಗಿದ್ದರೆ ನನ್ನ ವಜ್ರ ಕಿರೀಟ ತರುವವರೆಗೆ ನಿನ್ನ ಮುಖ ತೋರಿಸಬೇಡವೆಂದು ಹೇಳುವರು.

4 ಅರಬ್ ದೇಶದ ಏಜೆಂಟರು ಭಾರತ ಪ್ರವೇಶವನ್ನು ಕೇಂದ್ರಸರ್ಕಾರ ನಿಷೇಧಿಸಿದಾಗ ಕರುಣಾಕರನ್ ಸರ್ಕಾರ ಅದನ್ನು ಕಡೆಗಣಿಸಿ ಅರಬ್‌ಏಜೆಂಟರಿಗೆ ಭವ್ಯ ಸ್ವಾಗತ ನೀಡಿ ಸತ್ಕರಿಸಿದ್ದು ಒಂದು ಚಿತ್ರ.

5 ಕರುಣಾಕರನ್ ಲಾಟರಿ ಟಿಕೇಟ್ ಮಾರುತ್ತಾ ಬೈಕ್ ಮೇಲೆ ಬರುತ್ತಿದ್ದಾರೆ, ಅವರ ಆಡಳಿತ ಅವಧಿಯಲ್ಲಿ 19ಮಂದಿ ಕೋಟ್ಯಾಧಿಶರು, 80 ಮಂದಿ ಲಕ್ಷಾಧಿಪತಿಗಳು ಹುಟ್ಟಿದ್ದಾರೆ, ಮುಂದಿನ ಡ್ರಾ ನಾಳೆ.

6 ಕಾಂಗರೂ ಎಂಬ ಪ್ರಾಣಿರೂಪದ ಕರುಣಾಕರನ್ ತನ್ನ ಮಿತ್ರ ಪಕ್ಷಗಳನ್ನು ಹೊಟ್ಟೆಯಲ್ಲಿ ಭದ್ರವಾಗಿ ರಕ್ಷಣೆ ನೀಡಿ ಕಾಪಾಡಿಕೊಳ್ಳುತ್ತಿರುವುದು.

ಕೇರಳದ ಫಲವತ್ತಾದ ಅರಣ್ಯ ಸಂಪತ್ತನ್ನು ಹಗಲು ದರೋಡೆ ಮಾಡುತ್ತಿರುವುದು. ಪಿ.ಯು.ಸಿ. ಮಂಡಳಿಗಳ ಹಗರಣ, ಕಾಂಗ್ರೆಸ್ ಆಡಳಿತದ ಕಳೆದ 4-5 ವರ್ಷದಲ್ಲಿ ರಾಜ್ಯದಲ್ಲಿ ನಡೆದ ಕೊಲೆ-ದರೋಡೆ, ಮೊಕದ್ದಮೆಗಳ ದಾಖಲೆಪಟ್ಟಿ ಇತ್ಯಾದಿ ಅನೇಕ ರೀತಿಯ ಆಕರ್ಷಕ ಗೋಡೆ ಬರಹಗಳು ಜನರಿಗೆ ಶಿಕ್ಷಣ ನೀಡುವಂತಿದ್ದವು.

ಆಂಧ್ರದಲ್ಲಿ ಕಾಂಗ್ರೈ, ಸಿ.ಪಿ.ಐ. ನಿಂದ ಪಕ್ಷದ ಕಾರ್ಯಕರ್ತರ ಮೇಲೆ ಧಾಳಿ

ಕಳೆದ ತಿಂಗಳು ನಡೆದ ಮಂಡಲ್ ಪಂಚಾಯತಿ ಚುನಾವಣೆಗಳ ಸಂದರ್ಭದಲ್ಲಿ, ನಂತರ ಕೂಡಾ ಆಂದ್ರದಾದ್ಯಂತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ನಾಯಕರ, ಕಾರ್ಯಕರ್ತರ, ಅಭಿಮಾನಿಗಳ ಮೇಲೆ ಕಾಂಗ್ರೆಸ್(ಐ) ಮತ್ತು ಸಿ.ಪಿ.ಐ ದವರ ಹತ್ಯೆ, ಧಾಳಿ ಮಿತಿಮೀರಿದೆ ಎಂದು ವಿಧಾನ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರಾದ ಶ್ರೀ ನರ್ರಾ ರಾಘವ ರೆಡ್ಡಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿ.ಪಿ.ಐ., ಕಾಂಗ್ರೈನವರು ಮಾರ್ಕ್ಸ್‌ವಾದಿಗಳ ಮೇಲೆ ಧಾಳಿ ನಡೆಸಿ, ಕೊಲೆ ಮಾಡಿದರೂ, ಪೋಲೀಸರು ಅಪರಾಧಿಗಳನ್ನು ಬಂಧಿಸದೆ ಮಾರ್ಕ್ಸ್‌ವಾದಿಗಳ ಮೇಲೆ ದಾವೆ ಹೂಡಿದ್ದಾರೆ. ಆದರೆ ಕೊಲೆಪಾತಕರ ಮೇಲೆ ಯಾವುದೇ ದಾವೆ ಇಲ್ಲದಿರುವುದರ ಬಗ್ಗೆ ಖಂಡಿಸಲಾಗಿದೆ.

ನಲ್ಗೊಂಡ ಜಿಲ್ಲೆಯಲ್ಲಿ ಈ ಕೃತ್ಯ ಮಿತಿಮೀರಿದೆ. ಕಳೆದ ತಿಂಗಳು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಸಿ.ಪಿ.ಐ.(ಎಂ)ನ ಸದಸ್ಯರಾದ ಯಲ್ಲರೆಡ್ಡಿಗುಡಂ, ಶ್ರೀ ಕಂದಲಗುರುವಾರೆಡ್ಡಿ, ಡಿ.ವೈ.ಎಫ್.ಐ.ನ ಡಿವಿಜನ್ ಸಮಿತಿ ಸದಸ್ಯರಾದ ಶ್ರೀ ವೆಂಕಟೇಶ್ವರ ರೆಡ್ಡಿ ಇವರುಗಳನ್ನೂ ದಾರುಣವಾದ ಹತ್ಯೆಮಾಡಿದರು ಸಿ.ಪಿ.ಐ. ಗೂಂಡಾಗಳು. ಇವರೊಟ್ಟಿಗೆ ಕಾಂಗ್ರೈ ಗೂಂಡಾಗಳು ಸೇರಿದ್ದರು. ಈ ಕೊಲೆಗೆ ನಾಯಕತ್ವ ವಹಿಸಿದ್ದವನನ್ನು ಬಂಧಿಸಲು ಪೋಲೀಸರು ಪಕ್ಷಪಾತ ತೋರಿದ್ದಾರೆ. ಕೊಲೆಗೈದವನ ಮನೆ ಮುಂದೆ ಪ್ರತಿಭಟಿಸಲು ಸಿ.ಪಿ.ಐ.[ಎಂ]ನ ಹಿತೈಷಿಗಳು ಸೇರಿದಾಗ, ಪೋಲೀಸರು ಲಾಠಿಚಾರ್ಜ್ ಮಾಡಿ 40 ಜನರ ಮೇಲೆ ಐದು ಕೇಸುಗಳನ್ನು ದಾಖಲು ಮಾಡಿದ್ದಾರೆ.

ಇದೇ ಸಿ.ಪಿ.ಐ. ಗುಂಪು ಗರಿಡೆಪಲ್ಲಿಯಲ್ಲಿ ಸಿ. ಪಿ. ಐ. (ಎಂ) ಸದಸ್ಯರ ಮೂರು ಮನೆಗಳಿಗೆ ದಾಳಿ ನಡೆಸಿದ್ದಾರೆ. ಶ್ರೀಮತಿ ವೆಂಕಟೇಶ್ವರಮ್ಮ ಇದರಿಂದ ತೀವ್ರಗಾಯಗೊಂಡಿದ್ದಾರೆ.

ಕಳೆದ ತಿಂಗಳು ಎರಡನೇ ತಾರೀಕು ಮಾದಾವರ ಗ್ರಾಮದಲ್ಲಿಸಿ.ಪಿ.ಐ(ಎಂ) ಪಕ್ಷದ ಅಭಿಮಾನಿ ಶ್ರೀ ಎಲ್ಕಾ ನರಸಿಂಹಾ ರೆಡ್ಡಿಯವರನ್ನೂ ಕಾಂಗ್ರೈ ಗುಂಪೊಂದು ಹತ್ಯೆಮಾಡಿದರು. ಈ ಹತ್ಯೆಮಾಡಿದವರೆಲ್ಲರೂ ಈ ಹಿಂದೆ ಕೊಲೆಗಳನ್ನು ಮಾಡಿದವರೇ ಆಗಿದ್ದರೂ ಪೋಲೀಸರು ಇವರನ್ನೂ ಬಂಧಿಸಲಿಲ್ಲ. ○

ಉರುಳಿಸುವ ಪ್ರಯತ್ನ ಮಾಡಿದರೆ ತಿರುಗಿಸಿ ಹೊಡೆಯುತ್ತೇವೆ

– ಕಾ|| ಜ್ಯೋತಿಬಸು

ಪ. ಬಂಗಾಳ, ಕೇರಳ, ತ್ರಿಪುರಾ ಸರ್ಕಾರಗಳನ್ನು ಉರುಳಿಸಲು ಪ್ರಯತ್ನಿಸಿದರೆ ನಮ್ಮ ಸರ್ವಶಕ್ತಿಯನ್ನು ಕ್ರೋಢೀಕರಿಸಿ ಹಾಗೂ ಭಾರತದಲ್ಲಿರುವ ಎಲ್ಲಾ ಜನರ ಬೆಂಬಲವನ್ನು ಗಳಿಸಿ ತಿರುಗಿಸಿ ಕೊಡುತ್ತೇವೆ.

ಈ ಮೂರು ರಾಜ್ಯಗಳಲ್ಲಿಯೂ ಜನರೇ ಆರಿಸಿರುವ ಜನರ ಪರ ಸರ್ಕಾರಗಳು ಆಳುತ್ತಿವೆ. ಇದನ್ನು ಉರುಳಿಸುವ ಉದ್ದೇಶದ ಪ್ರಯತ್ನ ಮಾಡಿದರೆ ಜನ ಶಕ್ತಿಯ ಬಲದಿಂದ ಈ ಧಾಳಿಯನ್ನು ತಡೆಯುತ್ತೇವೆ.

ದೆಹಲಿಯ ರಾಮಲೀಲಾ ಮೈದಾನದಲ್ಲಿ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಹಾಗೂ ಪ.ಬಂಗಾಳದ ಎಡರಂಗ ವಿಜಯೋತ್ಸವವನ್ನು ಆಚರಿಸಲು ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕಾಂ. ಜ್ಯೋತಿಬಸು ಮಾತನಾಡಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ಎಡಪ್ರಜಾಸತ್ತಾತ್ಮಕ ಐಕ್ಯತೆಯನ್ನು ರೂಪಿಸುವುದು ಭಾರತದ ಇತಿಹಾಸದ ಈ ಕಾಲಘಟ್ಟದ ಅವಶ್ಯಕತೆಯಾಗಿದೆ.

ಈ ಎಡ ಪ್ರಜಾಪ್ರಭುತ್ವ ರಂಗಗಳು ಕೇವಲ ಚುನಾವಣೆಗಾಗಿ ಕೂಡುವ ತಾತ್ಕಾಲಿಕ ಕೂಟಗಳಲ್ಲ ಆದರೆ ಜೀವನದ ಸಮಸ್ಯೆಗಳಿಗಾಗಿ ಹೋರಾಡುವ ಒಕ್ಕೂಟ. ಪ.ಬಂಗಾಳದ ಎಡರಂಗ ಕೇವಲಓಟಗಾಗಿ ಮಾತ್ರ ಮೂಡಿದಲ್ಲ ಎಲ್ಲಾ ವಿಭಾಗದ ಜನಗಳ ಹೋರಾಟ ಒಗ್ಗೂಡಿದ ಸಮರಶೀಲರಂಗ. ಆದುದರಿಂದ ಈ ರಂಗದ ಪಕ್ಷಗಳು ಜನರ ಮಧ್ಯೆ ಆಳವಾಗಿ ಬೇರು ಬಿಡಲು ಕಾರಣವಾಗಿದ್ದು. ಕೇವಲ ಚುನಾವಣೆಯ ಸಮಯದಲ್ಲಿ ಜನರ ಬಳಿ ಹೋಗುವ ಕಾಂಗ್ರೆಸ್ ಪಕ್ಷಕ್ಕೆ ಇದು ಅರ್ಥವಾಗುವುದಿಲ್ಲ. ಆರ್ಥಿಕ ಸಾಮಾಜಿಕ ರಂಗಗಳಲ್ಲಿ ಒಂದು ಕನಿಷ್ಟ ಕಾರ್ಯಕ್ರಮವನ್ನು ರೂಪಿಸಿಕೊಂಡ ಎಡಪ್ರಜಾಸತ್ತಾತ್ಮಕ ರಂಗ ಇಂದಿನ ಚಾರಿತ್ರಿಕ ಅಗತ್ಯವಾಗಿದೆ. ಈ ಒಕ್ಕೂಟ ಜನರ ಸಮಸ್ಯೆಗಳಿಗಾಗಿ ನಿರಂತರ ಹೋರಾಟ ಮಾಡಬೇಕು. ಅಂತಹ ಪಕ್ಷಗಳಲ್ಲದೆ ಕೇವಲ ವೋಟಿಗಾಗಿ ಜನರನ್ನು ಸಮೀಪಿಸುವ ಪಕ್ಷಗಳನ್ನು ಜನರು ಏಕೆ ನಂಬಬೇಕು ? 14 ವಿರೋಧ ಪಕ್ಷಗಳ ಮುಖ್ಯಮಂತ್ರಿಗಳ ಕಲ್ಕತ್ತಾ, ಶ್ರೀನಗರ, ದೆಹಲಿ ಶೃಂಗಾ ಸಭೆಗಳು ಯಶಸ್ವಿಯಾಗಲ್ಲಿ ಈ ಶೃಂಗಸಭೆಗಳ ಪ್ರಯತ್ನ ಮುಂದುವರಿಯಬೇಕು.

ಚುನಾವಣೆಗಾಗಿ ಅಲ್ಲದೆ ಜನರ ಸಮಸ್ಯೆಗಳಿಗಾಗಿ ಹೋರಾಡಬೇಕು. ಎಂದರು ಕಾಂ. ಜ್ಯೋತಿಬಸು

ಪತ್ರಕರ್ತರ ಕಿಡಿಗೇಡಿ ಪ್ರಶ್ನೆಗಳಿಗೆ ಕಾ|| ಜ್ಯೋತಿಬಸು ಮಾರುತ್ತರ

ಇತ್ತೀಚೆಗೆ ದೆಹಲಿಯಲ್ಲಿ ಕಾ||ಜ್ಯೋತಿಬಸುರವರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಬಂಡವಾಳಶಾಹಿ ಪತ್ರಿಕೆಗಳ ಪತ್ರಕರ್ತರು ಬೇಕುಬೇಕೆಂದೇ ಕೇಳಿದ ಪ್ರಶ್ನೆಗಳಿಗೆ ತಕ್ಕ ಮಾರುತ್ತರವನ್ನೂ ಪಡೆದರು.

ಪ್ರಶ್ನೆ : ರಾಜೀವ್ ಗಾಂಧಿಯವರ ಸರ್ಕಾರದ ಫೇರ್‌ಫಾಕ್ಸ್ ಹಗರಣದ ಸಂಬಂಧವಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಭಾರತೀಯ ಕಮ್ಯುನಿಸ್ಟ್ ಪಕ್ಷಗಳಿಗೆ ಹೆಚ್ಚು ಟೀಕೆ ಮಾಡದಿರಲು ಆದೇಶ ನೀಡಿದೆ ಎಂಬ ವರ್ತಮಾನ ಕೇಳಿಬರುತ್ತಿದೆ ಇದರ ಬಗ್ಗೆ ನೀವೇನು ಹೇಳುತ್ತೀರಿ.

ಉ :ನಿಮ್ಮ ಈ ಹೊಸ ಸಂಶೋಧನೆಯಿಂದ ತೊಂದರೆಯೇನಿಲ್ಲ. ಆದರೆ ಆ ರೀತಿ ಏನೂ ಸಂಭವಿಸಿಲ್ಲ. ನೀವು ಸಿ.ಪಿ.ಐ.(ಎಂ) ಚರಿತ್ರೆಯನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದರೆ ಈ ಪ್ರಶ್ನೆಯನ್ನು ನನ್ನ ಹತ್ತಿರ ಕೇಳುತ್ತಿರಲಿಲ್ಲ. ಬೇರೆ ಕಮ್ಯುನಿಸ್ಟ್ ಪಕ್ಷಗಳು ಎಷ್ಟೇ ದೊಡ್ಡದಾದರೂ ಕೂಡ ಅವರ ಆದೇಶಗಳನ್ನು ಸಿ.ಪಿ.ಐ.[ಎಂ] ಸ್ವೀಕರಿಸುವುದಿಲ್ಲ. ನಮ್ಮ ಪಕ್ಷದ ಚರಿತ್ರೆಗೊತ್ತಿದ್ದರೆ ಇದು ನಿಮಗೆ ತಿಳಿಯುತ್ತಿತ್ತು.

ಪ್ರ : ಕೆಂಪುಕೋಟೆಯ ಮೇಲೆ ಕೆಂಪು ಬಾವುಟವನ್ನು ಹಾರಿಸುತ್ತೇವೆ" ಎಂದು ನೀವು ಘೋಷಿಸಿ 60ವರ್ಷಗಳಾದವು ಇನ್ನು ಯಾವಾಗ ನೀವು ಹಾರಿಸುವುದು ?

ಉ: ನಾನು ಒಬ್ಬ ರಾಜಕಾರಣಿ ನನ್ನ ಪಕ್ಷ ಒಂದು ರಾಜಕೀಯ ಪಕ್ಷ, ಯಾವಾಗ ನಾವು ಆಡಳಿತಕ್ಕೆ ಬರುತ್ತೇವೆಂದು ಹೇಳಲು ನಾನು ಜ್ಯೋತಿಷ್ಯನಲ್ಲ. ಇಡೀ ಜಗತ್ತು ಸಮಾಜವಾದದ ಕಡೆಗೆ ಚಲಿಸುತ್ತಿದೆ. ನಮ್ಮ ದೇಶವೂ ಕೂಡ ಅದೇ ಪಥದಲ್ಲಿದೆ. ಅದನ್ನು ನೀವು ತಿಳಿದುಕೊಳ್ಳುವುದು ನಿಮಗೇ ಒಳ್ಳೆಯದು.

ಪ್ರ : ಬಂಗಾಳದಲ್ಲಿ ರಾಜೀವ್ ಗಾಂಧಿಯವರ ಸಭೆಯಲ್ಲಿ ಲಕ್ಷಾಂತರ ಜನ ಸೇರುತ್ತಿದ್ದರೂ ಕಾಂಗ್ರೆಸ್(ಐ) ಸೋಲಲು ಕಾರಣವೇನು ?

ಉ: ಪರವಾಗಿಲ್ಲ, ನೀವೊಬ್ಬ ಒಳ್ಳೆಯ ಪತ್ರಕರ್ತರು. ಆದರೆ ಈ ಪ್ರಶ್ನೆಯನ್ನು ನನ್ನ ಬಳಿ ಕೇಳುವುದಕ್ಕೆ ಬದಲಾಗಿ ರಾಜೀವ್‌ಗಾಂಧಿಯವರ ಹತ್ತಿರ ಹೋಗಿ ಕೇಳಿ.

ಪ್ರ :ಪ ಬಂಗಾಳದಲ್ಲಿ ಮಾರ್ಕ್ಸಿಸ್ಟರ ಧಾಳಿ ಕಾನೂನು ವ್ಯವಸ್ಥೆಯ ದೊಡ್ಡ ಸಮಸ್ಯೆಯಾಗಿದೆಯಲ್ಲಾ.

ಉ: ಹೌದಾ ನೀವು ಬಂಗಾಳದಿಂದ ಬಂದಿದ್ದೀರಾ,ನಿಮಗೆ ಅಲ್ಲಿಯ ಪರಿಸ್ಥಿತಿ ಗೊತ್ತಿದೆಯಾ ಅವರವರ ನಡುವೆ ನಡೆಯುತ್ತಿರುವ ಒಳ ಜಗಳಗಳಿಂದಾಗಿ ಕಾಂಗ್ರೆಸ್(ಐ)ನಾಯಕರುಗಳಿಗೆ ಪ್ರತಿದಿನವೂ ಪೋಲೀಸರ ರಕ್ಷಣೆ ನೀಡಬೇಕಾಗಿದೆ. ನೀವು ಇಲ್ಲಿ ದೆಹಲಿಯಲ್ಲಿ ಕಾಂಗ್ರೆಸ್(ಐ)ನವರಿಗೆ ಬಹಳ ಹತ್ತಿರ ಇದ್ದೀರಿ ಆ ನಿಮ್ಮ ಮಿತ್ರರಿಗೆ ಪ.ಬಂಗಾಳದ ಕಾಂಗ್ರೆಸ್‌ನವರನ್ನು ಒಳ್ಳೆಯ ದಾರಿಗೆ ತರುವಂತೆ ಬುದ್ಧಿ ಹೇಳಿ.

ಪ್ರ : ಕಾ| ಇ. ಎಂ. ಎಸ್‌ನವರನ್ನು ವಿರೋಧ ಪಕ್ಷದ ವಕ್ತಾರನಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲಿಸುತ್ತೀರೆಂದು ಸುದ್ದಿಯಾಗಿದೆಯಲ್ಲಾ.

ನೀವು ಕೇಳಿದ ಈ ಸುದ್ದಿ ಸರಿಯಿಲ್ಲ. ಕಾ|| ಇ. ಎಂ. ಎಸ್‌ರವರಿಗೆ ಇನ್ನೂ ಅನೇಕ ಉತ್ತಮ ಕೆಲಸಗಳಿವೆ.

ಟೈವಾಕ್ ಮುಷ್ಕರ ಮುಕ್ತಾಯ

ಧಾರವಾಡದ ಟೈವಾಕ್ ಇಂಡಸ್ಟ್ರೀಸ್‌ನ ಕಾರ್ಮಿಕರು ಫೆ.16 ರಿಂದ ನಡೆಸುತ್ತಿದ್ದ ಅನಿರ್ದಿಷ್ಟ ಕಾಲದ ಮುಷ್ಕರ ಮುಕ್ತಾಯಗೊಂಡಿದೆ. ಹಲವಾರು ಬಾರಿ ದ್ವಿಪಕ್ಷೀಯ ತ್ರಿಪಕ್ಷೀಯ ಮಾತುಕತೆಗಳು ನಡೆದಿದ್ದರೂ ಸಮಸ್ಯೆ ಇತ್ಯರ್ಥವಾಗದಿದ್ದ ಕಾರಣ ಹುಬ್ಬಳ್ಳಿಯ ಕಾರ್ಮಿಕ ನ್ಯಾಯಾಲಯಕ್ಕೆ ಸರಕಾರವು ಈ ಪ್ರಕರಣವನ್ನು ಒಪ್ಪಿಸಿತು. ಅಲ್ಲದೇ ಸರ್ಕಾರ ಬೀಗಮುದ್ರೆಯನ್ನು ನಿಷೇಧಿಸಿ ಎಲ್ಲಾ ಕಾರ್ಮಿಕರೂ ಕೂಡಲೇ ಕೆಲಸಕ್ಕೆ ಹಾಜರಾಗಬೇಕೆಂದು ಆದೇಶಿಸಿತು. ಆದರೆ ಆಡಳಿತ ವರ್ಗ ಕಾರ್ಮಿಕರನ್ನು ಹಂತ ಹಂತವಾಗಿ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ತಿಳಿಸಿತು. ಇದನ್ನು ಪ್ರತಿಭಟಿಸಿ ಕಾರ್ಮಿಕರು ಅನಿರ್ದಿಷ್ಟ ಮುಷ್ಕರಕ್ಕೆ ಇಳಿದಿದ್ದಾರೆ.

ಸಿ.ಐ.ಟಿ.ಯು.ಮುಖಂಡರು ಮತ್ತು ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಪರಿಸ್ಥಿತಿಯನ್ನು ವಿವರಿಸಿದಾಗ ಅವರು ಆಡಳಿತ ವರ್ಗವನ್ನು ಕರೆಸಿ ಎಲ್ಲರಿಗೂ ಕೆಲಸ ಕೊಡಬೇಕೆಂದು ತಿಳಿಸಿದರು. ಆದರೆ ಆಡಳಿತ ವರ್ಗ ಕಚ್ಚಾವಸ್ತುವಿನ ಕೊರತೆಯಿದೆಯೆಂಬ ಸುಳ್ಳು ನೆಪವನ್ನು ಒಡ್ಡಿತು. ಆದರೆ ಜಿಲ್ಲಾಧಿಕಾರಿಗಳ ಆದೇಶದಂತೆ ಕಾರ್ಖಾನೆಯ ಒಳಗೆ ಪರಿವೀಕ್ಷಣೆ ನಡೆಸಿದ ಸರ್ಕಾರೀ ಅಧಿಕಾರಿಗಳು ಸಾಕಷ್ಟು ಪ್ರಮಾಣದ ಕಚ್ಚಾವಸ್ತು ಇರುವುದನ್ನು ದೃಢಪಡಿಸಿತು. ಆಗ ಆಡಳಿತ ವರ್ಗ ನಿರ್ವಾಹವಿಲ್ಲದೆ ಏಪ್ರಿಲ್4ರಿಂದ ಎಲ್ಲಾ ಕಾರ್ಮಿಕರಿಗೂ ಕೆಲಸ ನೀಡಲು ಒಪ್ಪಿಕೊಂಡಿತು.

ಮುಷ್ಕರದ ಅವಧಿಯಲ್ಲಿ ಕಾರ್ಮಿಕರ ಪರಿಸ್ಥಿತಿ ತೀರಾ ಹದಗೆಟ್ಟಿದ್ದರಿಂದ ಸಂಘವು ಏಪ್ರಿಲ್7ರಿಂದ ಎಲ್ಲಾ ಕಾರ್ಮಿಕರಿಗೂ ತಲಾ 10 ಕೆ.ಜಿ. ಜೋಳ ಮತ್ತು 5ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಿರುವುದಾಗಿ ವರದಿಯಾಗಿದೆ!

ವಿಜಯೋತ್ಸವ ಆಚರಣೆ

ಪಶ್ಚಿಮ ಬಂಗಾಳ ಮತ್ತು ಕೇರಳ ವಿಧಾನ ಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರ ವಿಜಯೋತ್ಸವವನ್ನು ತಾ.12ರಂದು ಉಡುಪಿಯಲ್ಲಿಯೂ ಆಚರಿಸಲಾಯಿತು. ಪಕ್ಷದ ಅಭಿಮಾನಿಗಳೂ ಸದಸ್ಯರೂ ಸೇರಿದ ಮೆರವಣಿಗೆಯು ನಗರದಲ್ಲಿ ಸುತ್ತಾಡಿದ ನಂತರ ಉಡುಪಿ ರಥಬೀದಿಯಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಸಿ.ಪಿ.ಐ.(ಎಂ)ನ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರಾದ ಕಾ|| ಕೆ.ಆರ್. ಶ್ರೀಯಾನರು ಮಾತನಾಡುತ್ತಾ "ದೇಶದ ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ಅಪಾಯ ತಂದೊಡ್ಡಿರುವ ಕಾಂಗ್ರೆಸ್(ಐ) ಸಂದರ್ಭಸಾಧಕ ನೀತಿಯಿಂದ ಜನರು ಬೇಸತ್ತಿದ್ದಾರೆ.ಇತ್ತೀಚೆಗೆ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೀನಾಯವಾದ ಸೋಲುಂಟಾಗಿದೆ. ಪ್ರಜಾಪ್ರಭುತ್ವ ಶಕ್ತಿಗಳು ಮುನ್ನಡೆ ಸಾಧಿಸಿದ್ದಾರೆ. ಇದರ ನೇತೃತ್ವದಲ್ಲಿ ಸಿ.ಪಿ.ಐ.(ಎಂ)ಪಕ್ಷವಿದೆ. ದೇಶದ ಎಲ್ಲಾ ಜಾತ್ಯಾತೀತ, ಪ್ರಜಾಪ್ರಭುತ್ವಶಕ್ತಿಗಳನ್ನು ಒಂದು ಗೂಡಿಸಿ ಪರ್ಯಾಯ ಶಕ್ತಿಯನ್ನು ಕಾಂಗ್ರೆಸಿಗೆ ದಿರಾಗಿ ಕಟ್ಟಿ ಬೆಳೆಸಲು ಮುಂದಾಗಬೇಕು. ಅಮೇರಿಕನ್ ಸಾಮ್ರಾಜ್ಯಶಾಹಿಯು ಭಾರತವನ್ನು ಛಿದ್ರಗೊಳಿಸಲು ಹೂಡಿರುವ ಒಳಸಂಚಿನ ಬಗ್ಗೆ ಜನತೆಯು ಎಚ್ಚರ ವಹಿಸಬೇಕಾಗಿದೆ. ಕೇರಳ ಮತ್ತು ಪಶ್ಚಿಮ ಬಂಗಾಳದ ಪ್ರಬುದ್ಧ ಜನತೆಯನ್ನು ಅಭಿನಂದಿಸುತ್ತಾ ನಮ್ಮ ಕರ್ನಾಟಕದಲ್ಲಿಯೂ ಸರ್ವಾಧಿಕಾರಿ ಶಕ್ತಿಗಳನ್ನು ಛಿದ್ರಕಾರಿಗಳನ್ನು ಸೋಲಿಸಲು ಪಣ ತೊಡೋಣ" ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಕಾ|| ಡೇವಿಡ್ ಎ. ಕರ್ಕಡ ವಹಿಸಿದ್ದರು. ಪ್ರಾರಂಭದಲ್ಲಿ ಕಾ|| ಗುರುರಾಜ್‌ಸ್ವಾಗತಿಸಿ ಕೊನೆಯಲ್ಲಿ ಕಾ|| ಗುರುವ ಪೂಜಾರಿಯವರು ಧನ್ಯವಾದ ಸಲ್ಲಿಸಿದರು.

ವಾರ್ಷಿಕ ಮಹಾಸಭೆ

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ 5ನೇ ವಾರ್ಷಿಕ ಮಹಾಸಭೆ ಏ.4ರಂದು ಕಾ| ಸುಂದರ ನಾಯ್ಕರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯದರ್ಶಿ ಕಾ|| ವಾಸುದೇವ ಆಚಾರ್ಯ ವರದಿಯನ್ನು ಮಂಡಿಸಿದರು. ಖಜಾಂಚಿ ಕಾ|| ಬಾಲಕೃಷ್ಣ ಶೆಟ್ಟಿ ಲೆಕ್ಕಪತ್ರಗಳನ್ನು ಸಭೆಯ ಮುಂದಿಟ್ಟರು. ದ. ಕನ್ನಡ ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಕಾ| ಯು.ಬಿ. ಲೋಕಯ್ಯ, ಸುರತ್ಕಲ್ ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾ| ಹೊನ್ನಯ್ಯ, ಮೂಡುಬಿದ್ರೆಯ ಕಾ| ರಮಣಿ, ಕುಪ್ಪೆಪದವಿನ ಕಾ| ನೀಲಿಯ್ಯ ನಾಯ್ಕ, ಅಳಪೆಯ ಕಾ| ಜೆ. ಬಾಲಕೃಷ್ಣ ಶೆಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯು ಮುಂದಿನ ಅವಧಿಗಾಗಿ ಕೆಳಕಂಡ ಪದಾಧಿಕಾರಿಗಳನ್ನು ಚುನಾಯಿಸಿದೆ.

ಅಧ್ಯಕ್ಷ– ಕಾ|| ಸುಂದರ ನಾಯ್ಕ

ಉಪಾಧ್ಯಕ್ಷರು– ಕಾ|| ಸೂರಿದಾಸ್ ಮತ್ತು ಕಾ| ಸರೋಜಿನಿ

ಕಾರ್ಯದರ್ಶಿ– ಕಾ||ವಾಸುದೇವ ಆಚಾರ್ಯ

ಜತೆ ಕಾರ್ಯದರ್ಶಿ– ಕಾ|| ಲೀನಾಡಿ ಕೋಸ್ತಾ ಮತ್ತು ಕಾ|| ಸದಾಶಿವದಾಸ್

ಖಜಾಂಚಿ– ಕಾ|| ಬಾಲಕೃಷ್ಣ ಶೆಟ್ಟಿ

ಅಲ್ಲದೇ 22ಜನರ ಸಮಿತಿಯನ್ನೂ ಚುನಾಯಿಸಲಾಗಿದೆ.

ಸಿ ಐ ಟಿ ಯು ಧರಣಿ ಸತ್ಯಾಗ್ರಹ

ಹರಿಹರ :

ರಾಜ್ಯಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಹರಿಹರದ ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಗಳ ಕಾರ್ಮಿಕರು 26-3-87 ರಂದು ದಾವಣಗೆರೆ ಉಪ ವಿಭಾಗಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಸತ್ಯಾಗ್ರಹ ಆರಂಭಿಸುವ ಮೊದಲು ಕಾರ್ಮಿಕರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಗೆ ತೆರಳಿದರು. ಬೀಡಿ ಕಾರ್ಮಿಕರ ಸಮಸ್ಯೆಗಳ ಕುರಿತು ಅವರ ಗಮನ ಸೆಳೆದಾಗ 6-4-87ರಂದು ಸ್ಥಳಕ್ಕೆ ಭೇಟಿಯಿತ್ತು ಪರಿಶೀಲಿಸುವುದಾಗಿ ಅವರು ಭರವಸೆ ಕೊಟ್ಟರು.

ಉಪ ವಿಭಾಗಾಧಿಕಾರಿಗಳ ಕಛೇರಿಯ ಎದುರು ನಡೆದ ಧರಣಿ ಸತ್ಯಾಗ್ರಹದ ಕೊನೆಯಲ್ಲಿ ಅವರಿಗೆ ಮನವಿಯೊಂದನ್ನು ಸಲ್ಲಿಸಲಾಯ್ತು. ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಗಳಲ್ಲಿ ಜಯಬೇರಿ ಹೊಡೆದ ಸಿ.ಪಿ.ಐ (ಎಂ) ಪಕ್ಷಕ್ಕೆ ಜಯಕಾರದ ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನಕಾರರು ಚದುರಿದರು. ಕಾ|| ನಿತ್ಯಾನಂದ ಸ್ವಾಮಿ, ಜಯಾನಂದ, ಆನಂದ ರಾವ್, ದಿವಾಕರ ಮತ್ತು ದಾವಣಗೆರೆ ಪುರಸಭಾ ಸದಸ್ಯ ಜಯಣ್ಣ ಜಾದವ್ ಮೆರವಣಿಗೆ ಸತ್ಯಾಗ್ರಹದ ನೇತೃತ್ವ ವಹಿಸಿದ್ದರು.

ಉತ್ತರ ಕೊರಿಯಾಕ್ಕೆ ಕಾ|| ಇ. ಎಂ. ಎಸ್.

ಉತ್ತರ ಕೊರಿಯಾದ ಆಹ್ವಾನವನ್ನು ಸ್ವೀಕರಿಸಿ ಕಾ|| ಇ. ಎಂ. ಎಸ್. ರವರು ಉತ್ತರ ಕೊರಿಯಾದಲ್ಲಿ ಮೂರು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಹಿಂತಿರುಗಿ ಬರುವಾಗ ಚೀನಾದಲ್ಲಿ ಒಂದು ದಿನ ತಂಗುವರು ಏಪ್ರಿಲ್ 15 ರಂದು ಭಾರತಕ್ಕೆ ಮರಳಿ ಬರಲಿದ್ದಾರೆ.

ಮೇ ದಿನದ ಪ್ರಣಾಳಿಕೆ - ಸಿ. ಐ. ಟಿ. ಯು.

ಕಾರ್ಮಿಕ ವರ್ಗಕ್ಕೆ ಅಭಿನಂದನೆಗಳು

ಮೇ ದಿನದಂದು ಸಿ.ಐ.ಟಿ.ಯು ಅಂತರಾಷ್ಟ್ರೀಯ ಕಾರ್ಮಿಕ ವರ್ಗಕ್ಕೆ ತನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಕಳೆದ. ವರ್ಷ ಪೂರ್ತಿ ಆಚರಿಸಲಾದ ಮೇ ದಿನದ ಶತಮಾನೋತ್ಸವವು ಕಾರ್ಮಿಕ ವರ್ಗದ ವಿವಿಧ ವಿಭಾಗಗಳ ನಡುವಿನ ಸಂಬಂಧವನ್ನು ಇನ್ನಷ್ಟು ಬಲಪಡಿಸಿದೆ, ವಿಶ್ವಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಸ್ಥಾಪನೆಗಾಗಿ ಹೋರಾಟ ನಡೆಸುವ ಕಾರ್ಮಿಕ ವರ್ಗದ ಸಂಕಲ್ಪವನ್ನೂ ಅದು ಮತ್ತಷ್ಟು ದೃಢಗೊಳಿಸಿದೆ.

ಅಮೇರಿಕಾ ಸಾಮ್ರಾಜ್ಯಶಾಹಿಯ ವಿರುದ್ಧ ಸಾವು ಬದುಕಿನ ಸೆಣಸಾಟದಲ್ಲಿ ನಿರತರಾಗಿರುವ ನಿಕರಾಗುವಾದ ಸಮರಧೀರ ಜನತೆಗೆ ಸಿ.ಐ.ಟಿ.ಯುವಿನ ಶುಭಾಶಯಗಳು. ಅಮೇರಿಕಾದ ಚೇಲಾಗಳು ಮತ್ತು ಅವರ ಮಿತ್ರರ ಒಳಸಂಚನ್ನು ಎದುರಿಸಿ ತಮ್ಮ ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಯನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿರುವ ಅಫಘಾನಿಸ್ತಾನದ ಜನತೆ ಹಾಗೂ ದುಡಿಯುವ ವರ್ಗಕ್ಕೆ ಮತ್ತು ಅಮಾನುಷ ವರ್ಣಭೇದ ನೀತಿಗೆದುರಾಗಿ ಅಸಾಮಾನ್ಯ ಧೈರ್ಯದಿಂದ ಹೋರಾಡುತ್ತಿರುವ ದಕ್ಷಿಣ ಆಫ್ರಿಕಾದ ಜನತೆಗೂ ಸಿ.ಐ.ಟಿ.ಯು ತನ್ನ ವಂದನೆಗಳನ್ನು ಅರ್ಪಿಸುತ್ತದೆ.

ಇಂದು ಜಗತ್ತಿನ ಎಲ್ಲ ಸಮಾಜವಾದಿ ರಾಷ್ಟ್ರಗಳೂ ತಮ್ಮ ಸಮಾಜವಾದಿ ವ್ಯವಸ್ಥೆ ಸಾಧಿಸಿರುವ ಅತ್ಯಂತ ಮಹತ್ವಪೂರ್ಣವಾದ ಸಾಧನೆಗಳನ್ನು ವಿಶ್ವಕ್ಕೆ ತೋರಿಸಿಕೊಡಲು ಸಿದ್ಧವಾಗಿ ನಿಂತಿವೆ. ವಿಶ್ವಶಾಂತಿಗಾಗಿಯೂ ಅವು ನಿರಂತರ ಹೋರಾಟ ಮಾಡಲು ಬದ್ಧವಾಗಿದೆ. ಈ ಎಲ್ಲ ಸಮಾಜವಾದಿ ರಾಷ್ಟ್ರಗಳ ದುಡಿಯುವ ವರ್ಗಕ್ಕೂ ಸಾಮಾನ್ಯಜನತೆಗೂ ಸಿ.ಐ.ಟಿ.ಯು.ನ ಮೇ ದಿನದ ಶುಭಾಶಯಗಳು.

ಸಾಮ್ರಾಜ್ಯಶಾಹಿಗಳ ಆಕ್ರಮಣ ನೀತಿಗೆದುರಾಗಿ, ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಮತ್ತು ಜನಸಾಮಾನ್ಯರ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಹೋರಾಟ ನಡೆಸುತ್ತಿರುವ ಎಲ್ಲ ಜನರಿಗೂ ಸಿ.ಐ.ಟಿ.ಯು ತನ್ನ ವಂದನೆಗಳನ್ನು ಸಲ್ಲಿಸುತ್ತದೆ.

ವ್ಯಾಪಕವಾಗಿ ಹಬ್ಬಿರುವ ನಿರುದ್ಯೋಗ ಸಮಸ್ಯೆ, ಅಮೂಲ್ಯವಾದ ಸಂಪನ್ಮೂಲಗಳನ್ನು ಆಕ್ರಮಣಕಾರಿ ಯುದ್ಧಗಳಿಗಾಗಿ ದುರುಪಯೋಗ ಪಡಿಸುತ್ತಿರುವುದು ಮತ್ತು ದುಡಿಯುವ ಜನತೆಯು ವೇತನ ಮಟ್ಟದ ಮೇಲಾಗುತ್ತಿರುವ ಆಕ್ರಮಣಗಳು-ಇವುಗಳೆಲ್ಲದರ ವಿರುದ್ಧ ಕಾರ್ಮಿಕ ವರ್ಗದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಎಲ್ಲ ದೇಶಗಳ ಕಾರ್ಮಿಕ ಸಂಘಟನೆಗಳು ಹಾಗೂ ಟ್ರೇಡ್‌ಯೂನಿಯನ್‌ಗಳ ಜಾಗತಿಕ ಫೆಡರೇಷನ್ ನಿರಂತರವಾಗಿ ಹೋರಾಟ ನಡೆಸುತ್ತಿವೆ. ಇವರೆಲ್ಲರಿಗೂ ಸಿ.ಐ.ಟಿ.ಯುವಿನ ಮೇ ದಿನದ ಶುಭಾಶಯಗಳು.

ಸೋವಿಯತ್ ಹಾಗೂ ಅಮೇರಿಕದ ಪಾತ್ರ

ಕಳೆದ ವರ್ಷವಿಡೀ ಸೋವಿಯತ್ ಒಕ್ಕೂಟವು ಶಾಂತಿಗಾಗಿ ಎಡೆಬಿಡದೆ ಹೋರಾಟ ಮಾಡಿರುವುದನ್ನು ಕಾಣಬಹುದು. ಈ ಹೋರಾಟದಲ್ಲಿ ಅದಕ್ಕೆ ಇತರ ಸಮಾಜವಾದಿ ರಾಷ್ಟ್ರಗಳೂ ನೆರವಾಗಿವೆ. ಅಣ್ವಸ್ತ್ರಗಳ ನಿಶ್ಶಸ್ತ್ರೀಕರಣಕ್ಕಾಗಿ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸೋವಿಯತ್‌ಒಕ್ಕೂಟ ಮುತುವರ್ಜಿ ವಹಿಸಿರುವುದನ್ನು ಭಾರತದ ಹಾಗೂ ಜಗತ್ತಿನ ಎಲ್ಲ ದೇಶಗಳ ಕಾರ್ಮಿಕ ವರ್ಗ ಉತ್ಸಾಹದಿಂದ ಬೆಂಬಲಿಸಿದೆ. ಅಣು ಸಮರದ ಅಪಾಯದಿಂದ ಜಗತ್ತನ್ನು ಪಾರು ಮಾಡುವಲ್ಲಿ ಅತ್ಯಂತ ದೊಡ್ಡ ಅಡ್ಡಿಯಾಗಿರುವುದು ಅಮೇರಿಕಾ ಸಾಮ್ರಾಜ್ಯಶಾಹಿಯೆನ್ನುವುದನ್ನು ಜಗತ್ತಿನ ಎಲ್ಲೆಡೆ ಹೆಚ್ಚುಹೆಚ್ಚು ಜನ ಅರ್ಥಮಾಡಿಕೊಳ್ಳುತ್ತಿದ್ದಾರೆ. ತಾರಾ ಸಮರದ ಯೋಜನೆಯನ್ನು ಮುಂದುವರಿಸುವ ಅಮೇರಿಕಾದ ಹಟಮಾರಿತನದ ನಿಲುವೆಯನ್ನು ಸಿ. ಐ. ಟಿ. ಯು ಬಲವಾಗಿ ಖಂಡಿಸುತ್ತದೆ. ತಾರಾ ಸಮರದ ಯೋಜನೆಯೆಂದರೆ ವಿನಾಶಕಾರಿಯಾದ ಅಣು ಅಸ್ತ್ರವನ್ನು ಬಾಹ್ಯಾಕಾಶದಲ್ಲೂ ಕೂಡಿಹಾಕುವುದಲ್ಲದೆ ಬೇರೇನೂ ಅಲ್ಲ. ಯುರೋಪಿನಲ್ಲಿ ನೆಲೆಗೊಳಿಸಲಾಗಿರುವ ಸೋವಿಯತ್ ಮತ್ತು ಅಮೇರಿಕದ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ಅಲ್ಲಿಂದ ಕೀಳಬೇಕೆನ್ನುವ ಸೋವಿಯತ್‌ಒಕ್ಕೂಟದ ಪ್ರಸ್ತಾಪಗಳಿಗೆ ಸಿ. ಐ. ಟಿ. ಯು ಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ಈ ಪ್ರಸ್ತಾಪ ಅಂಗೀಕರಿಸಲ್ಪಟ್ಟರೆ ಅದು ಅಣು ಅಸ್ತ್ರಗಳ ನಿಶ್ಶಸ್ತ್ರೀಕರಣದ ಪ್ರಯತ್ನದಲ್ಲೊಂದು ಮಹತ್ವದ ಹೆಜ್ಜೆಯಾಗುವುದರಲ್ಲಿ ಸಂದೇಹವಿಲ್ಲ.

ಮೇ ದಿನದಂದು ಭಾರತದ ಕಾರ್ಮಿಕ ವರ್ಗವೂ ವಿಶ್ವಶಾಂತಿಯ ಚಳುವಳಿಯ ಜೊತೆಗೆ ದನಿಗೂಡಿಸಬೇಕೆಂದೂ ಸಾಮ್ರಾಜ್ಯಶಾಹಿಗಳ ಯುದ್ಧಕೋರತನಕ್ಕೆ ತಡೆಹಾಕಿ ವಿಶ್ವಶಾಂತಿಯನ್ನು ಕಾಪಾಡಿಕೊಳ್ಳುವ ದೃಢ ನಿರ್ಧಾರವನ್ನು ವ್ಯಕ್ತಪಡಿಸಬೇಕೆಂದೂ ಸಿ.ಐ.ಟಿ.ಯು ಕರೆ ನೀಡುತ್ತದೆ.

ಜಾಗತಿಕ ಶಾಂತಿ ಚಳುವಳಿಯ ಜೊತೆಗೆ ಸಿ.ಐ.ಟಿ.ಯು ತನ್ನ ಸೌಹಾರ್ದವನ್ನು ವ್ಯಕ್ತಪಡಿಸುವುದಲ್ಲದೆ ವಿಶಾಲ ತಳಹದಿಯ ಜನ ವಿಭಾಗಗಳನ್ನು ಒಳಗೊಳ್ಳುವಂತೆ ಪ್ರಬಲವಾದ ಶಾಂತಿ ಚಳುವಳಿಯನ್ನು ಕಟ್ಟಿಬೆಳೆಸಬೇಕೆಂದೂ ಭಾರತದ ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಸೋವಿಯತ್ ಕಾರ್ಮಿಕ ವರ್ಗಕ್ಕೆ ಅಭಿನಂದನೆಗಳು

ಸಿ.ಐ.ಟಿ.ಯು ಸೋವಿಯತ್‌ಒಕ್ಕೂಟದ ಕಾರ್ಮಿಕ ವರ್ಗಕ್ಕೆತನ್ನಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೇ ಸಮಾಜವಾದಿ ವ್ಯವಸ್ಥೆಯ ಅಪಾರ ಅನುಕೂಲಗಳು ಮತ್ತುಕೈಗಾರಿಕಾ ಹಾಗೂ ತಾಂತ್ರಿಕ ಕ್ಷೇತ್ರದಲ್ಲಾಗಿರುವ ಪ್ರಗತಿಯ ಎಲ್ಲ ಸಾಧ್ಯತೆಗಳನ್ನೂ ಪೂರ್ಣವಾಗಿ ಬಳಸಿಕೊಂಡು ಸೋವಿಯತ್ ಒಕ್ಕೂಟದ ಆರ್ಥಿಕ ಪ್ರಗತಿಯನ್ನು ಇನ್ನಷ್ಟು ತೀವ್ರಗೊಳಿಸುವ ದಿಸೆಯಲ್ಲಿ ಅಲ್ಲಿನ ಕಾರ್ಮಿಕ ವರ್ಗ ನಡೆಸುತ್ತಿರುವ ನವೀನ ಪ್ರಯತ್ನಗಳಿಗೆ ಯಶಸ್ಸು ದೊರೆಯಲೆಂದೂ ಹಾರೈಸುತ್ತದೆ.

ತನ್ನ ದೇಶದ ಅರ್ಥವ್ಯವಸ್ಥೆಯನ್ನು ಪುನರ್‌ರಚಿಸುವ ಪ್ರಯತ್ನಗಳಲ್ಲಿಗಂಭೀರವಾಗಿ ತೊಡಗಿರುವ ಚೈನಾ ದೇಶದ ಕಾರ್ಮಿಕ ವರ್ಗಕ್ಕೂ ಸಿ.ಐ.ಟಿ.ಯು ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ಗಡಿ ಪ್ರದೇಶದಲ್ಲಿ

ನಮ್ಮ ದೇಶದ ಗಡಿ ಪ್ರದೇಶದಲ್ಲಿ ಹಾಗೂ ಭಾರತ ಉಪಖಂಡದ ಹಲವೆಡೆ ನಡೆಯುತ್ತಿರುವ ವಿದ್ಯಮಾನಗಳ ಕಡೆಗೆ ದೇಶದ ಕಾರ್ಮಿಕ ವರ್ಗದ ಗಮನವನ್ನು ಸೆಳೆಯಲು ಸಿ.ಐ.ಟಿ.ಯು ಬಯಸುತ್ತದೆ. ಅಮೇರಿಕದ ಸೈನಿಕಶಾಹಿ ಪಾಕಿಸ್ತಾನಕ್ಕೆ ಅಪಾರ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಒದಗಿಸಿದೆ. ಅಮೇರಿಕದ ಬೆಂಬಲ ಪಡೆದ ಪಾಕಿಸ್ತಾನದ ಲಷ್ಕರಿ ಆಡಳಿತೆ ಇದೀಗ ಅಣುಅಸ್ತ್ರಗಳನ್ನು ಹೊಂದಿದೆ. ಇವು ನಮ್ಮ ದೇಶದ ಭದ್ರತೆಗೆ ಗಂಡಾಂತರ ತಂದಿರುವುದಲ್ಲದೆ ಈ ಎರಡೂ ರಾಷ್ಟ್ರಗಳ ಜನರ ಪಾಲಿಗೆ ತೀರಾ ಅಸ್ಥಿರತೆಯ ವಾತಾವರಣವನ್ನು ಉಂಟುಮಾಡಿವೆ.

> **ಮೇ ದಿನ**
> **ಜಗತ್ತಿನೆಲ್ಲಾ ಕಾರ್ಮಿಕ**
> **ವರ್ಗ**
> **ಇಡಿ ಜಗತ್ತನ್ನೇ ಮುನ್ನಡೆಸು**
> **ತಮ್ಮ ಹೊಣೆಯನ್ನು**
> **ಅರಿತುಕೊಳುವ ದಿನ**
> **ಈ ದಿನದಂದು**
> **ದೇಶದ ಕಾರ್ಮಿಕ ವರ್ಗದ**
> **ಅತ್ಯುಜ್ವಲ ನಾಯಕ**
> **ಸಿ.ಐ.ಟಿ.ಯು.**
> **ನಮ್ಮ ಮುಂದಿನ**
> **ಕರ್ತವ್ಯಗಳೇನು ?**
> **ಎಂದು ಸಾಗುತ್ತದೆ.**
> **ಇದೋ**
> **ಮೇ ದಿನ ಪ್ರಣಾಳಿಕೆಯನ್ನ**
> **ಓದಿ.**

ಇತ್ತೀಚೆಗೆ ಭಾರತ ಪಾಕಿಸ್ತಾನ ಗಡಿ ಪ್ರದೇಶದಲ್ಲಿ ಎರಡೂ ದೇಶಗಳ ಸೈನ್ಯವನ್ನು ಜಮಾಯಿಸಿರುವುದು ಅತ್ಯಂತ ಅಪಾಯಕಾರಿ ಹಾಗೂ ಆಸ್ಫೋಟಕಾರಿ ಪರಿಸ್ಥಿತಿಯ ಸಂಕೇತ ಜಗತ್ತಿನಾದ್ಯಂತ ತಮ್ಮ ಮೇಲುಗೈಯನ್ನು ಸಾಧಿಸಿಕೊಳ್ಳಲು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಈ ಉಪಖಂಡದಲ್ಲಿ ಸಾಧ್ಯವಾದಷ್ಟು ಉದ್ವೇಗ ಮತ್ತು ಸಂಘರ್ಷದ ಸ್ಥಿತಿಯನ್ನು ನಿರ್ಮಿಸಲು ಅತ್ಸುಹಕರಾಗಿದ್ದಾರೆ. ಮೂಲಕ ಎರಡೂ ದೇಶಗಳ ಜನರಿಗೆ ಹಾನಿಯುಂಟು ಮಾಡುವುದು ಅವರ ಉದ್ದೇಶ. ಆದುದರಿಂದ ಭಾರತದ ಭದ್ರತೆ ಮತ್ತು ಸ್ವಾತಂತ್ರ್ಯಕ್ಕೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಒಡ್ಡುತ್ತಿರುವ ಅಪಾಯವನ್ನು ನಮ್ಮ ದೇಶದ ದುಡಿಯುವ ವರ್ಗ ಅರ್ಥ ಮಾಡಿಕೊಳ್ಳಬೇಕಾದುದು ಅಗತ್ಯ. ಭಾರತ ಮತ್ತು ಪಾಕಿಸ್ತಾನ ಈ ದೇಶಗಳ ದುಡಿಯುವ ವರ್ಗ ಮತ್ತು ಸಾಮಾನ್ಯಜನತೆ ಪರಸ್ಪರ ಸೌಹಾರ್ದದಿಂದ ಈ ಅಪಾಯದ ವಿರುದ್ಧ ಜಂಟಿಯಾಗಿ ಹೋರಾಡಬೇಕಾದುದೂ ಅಷ್ಟೇ ಅನಿವಾರ್ಯ. ಈ ಎರಡೂ ರಾಷ್ಟ್ರಗಳ ಸ್ವಾತಂತ್ರ್ಯವೂ ಅಷ್ಟೇ ಗಂಡಾಂತರದಲ್ಲಿದೆ.

ಪಾಕಿಸ್ತಾನದಲ್ಲಿನ ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಆದೇಶದ ಲಷ್ಕರಿ ಆಡಳಿತದ ವಿರುದ್ಧ ಮತ್ತು ದೇಶದ ಮೇಲೆ ಸವಾರಿ ಮಾಡಲು ಅಮೇರಿಕಾ ನಡೆಸುತ್ತಿರುವ ಸಂಚಿನ ವಿರುದ್ಧ ಹೋರಾಟನಡೆಸುತ್ತಿದ್ದಾರೆ. ಸಿ.ಐ.ಟಿ.ಯು. ಅವರಿಗೆ ತನ್ನ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ ಅವರ ಹೋರಾಟಕ್ಕೆ ಯಶಸ್ಸನ್ನೂ ಹಾರೈಸುತ್ತದೆ.

ಬಂಗ್ಲಾದೇಶದ ಸರ್ವಾಧಿಕಾರಿ ಆಡಳಿತೆಯ ವಿರುದ್ಧ ಹೋರಾಟನಡೆಯುತ್ತಿರುವ ಅಲ್ಲಿನ ಕಾರ್ಮಿಕ ವರ್ಗಕ್ಕೆ ಸಿ.ಐ.ಟಿ.ಯು.ನ ಶುಭಾಶಯಗಳು ರಾಜಸತ್ತೆಯ ಸರ್ವಾಧಿಕಾರ ಮತ್ತು ರಾಜನ ವಿವೇಚನಾರಹಿತ ದರ್ಬಾರಿನ ವಿರುದ್ಧ ಹೋರಾಟ ನಡೆಸುತ್ತಿರುವ ನೇಪಾಳದ ಕಾರ್ಮಿಕ ವರ್ಗಕ್ಕೂ ಸಿ.ಐ.ಟಿ.ಯು.ನ ಹಾರ್ದಿಕ ಅಭಿನಂದನೆಗಳು.

ಶ್ರೀಲಂಕಾದಲ್ಲಿ

ಶ್ರೀಲಂಕಾದಲ್ಲಿ ನಡೆದಿರುವ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಉಂಟಾಗಿರುವ ಕಳವಳಕಾರಿ ಪರಿಸ್ಥಿತಿ ಹಾಗೂ ಭಾರತ–ಶ್ರೀಲಂಕಾ ಸರ್ಕಾರಗಳ ಸಂಬಂಧದಲ್ಲಿ ವಿರಸ ಉಂಟಾಗಿರುವುದನ್ನು ಸಿ.ಎ.ಐ.ಯು. ಗಂಭೀರವಾಗಿ ಪರಿಗಣಿಸಿದೆ. ಶ್ರೀಲಂಕಾ ತನ್ನ ಸಮಗ್ರತೆ ಮತ್ತು ಸಾರ್ವಭೌಮತೆಗಳನ್ನು ಕಾಪಾಡಿಕೊಳ್ಳಬೇಕೆಂದು ಸಿ.ಐ.ಟಿ.ಯು. ಬಯಸುತ್ತದೆ. ಎಲ್ಲರಿಗೂ ಸ್ವೀಕಾರಾರ್ಹಪ್ರಜಾಪ್ರಭುತ್ವವಾದಿ ತತ್ವಗಳ ಆಧಾರದಲ್ಲಿ ತಮಿಳರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂದೂ ಸಿ.ಐ.ಟಿ.ಯು. ಒತ್ತಾಯಿಸುತ್ತದೆ. ಎರಡೂ ಕಡೆಗಳಲ್ಲಿ ಯಾರೇ ಆದರೂ ಅತಿರೇಕದ ನಿಲುವಿಗೆ ಅಂಟಿಕೊಂಡರೆ ಅದು ಸಾಮ್ರಾಜ್ಯಶಾಹಿಗೆ ತನ್ನ ಮೂಗು ತೂರಿಸಿ ಸಂಚು ನಡೆಸಲು ಅನುಕೂಲ ಮಾಡಿಕೊಡುವುದು ಖಂಡಿತ. ಅತಿರೇಕವಾದಿ ಮತ್ತು ಪ್ರತ್ಯೇಕವಾದಿ ನಿಲುಮೆಗೆ ಅಂಟಿಕೊಂಡು ಯಾವುದೇ ಪ್ರಜಾಪ್ರಭುತ್ವವಾದಿ ಪರಿಹಾರಕ್ಕೆ ಒಪ್ಪದೆ ಆ ಮೂಲಕ ಶ್ರೀಲಂಕೆಯನ್ನು ದುರ್ಬಲ ಗೊಳಿಸಲು ಪಿತೂರಿ ನಡೆಸುತ್ತಿರುವವರ ಪ್ರಯತ್ನಗಳಿಗೆ ಶ್ರೀಲಂಕೆಯ ಪುರೋಗಾಮಿ ಮತ್ತು ಎಡ ಶಕ್ತಿಗಳು ಹಾಗೂ ಕಾರ್ಮಿಕ ವರ್ಗವು ಸೋಲುಂಟುಮಾಡುವುದೆಂದು ಸಿ.ಐ.ಟಿಯು.ನ ನಂಬಿಕೆ. ಭಾರತ ಶ್ರೀಲಂಕೆಗಳ ನಡುವೆ ಮೈತ್ರಿಯುತ ಸಂಬಂಧವಿರಬೇಕೆಂದು ಸಿ.ಐ.ಟಿ.ಯು.ನ ಹಂಬಲ. ಈ ಎರಡೂ ಸರ್ಕಾರಗಳ ಮಧ್ಯೆ ಸಂಶಯದ ಗೋಡೆ ನಿರ್ಮಿಸುತ್ತಿರುವ ಸಾಮ್ರಾಜ್ಯಶಾಹಿಗಳ ಹೂಟಕ್ಕೆ ಸೋಲುಂಟು ಮಾಡಬೇಕೆಂದು ಸಿ.ಐ.ಟಿ.ಯು ಇಬ್ಬರಿಗೂ ಕರೆ ನೀಡುತ್ತದೆ.

ವಿಶ್ವಶಾಂತಿಗಾಗಿ ಜಗತ್ತಿನ ಎಲ್ಲಾ ಕಡೆ ನಡೆಯುತ್ತಿರುವ ಹೋರಾಟದಲ್ಲಿ ಭಾರತದ ಅಲಿಪ್ತನೀತಿ ವಹಿಸಿದ ಪಾತ್ರ ತುಂಬಾ ಮಹತ್ವವುಳ್ಳದ್ದು. ಅದು ಹೊಸದಾಗಿ ಸ್ವಾತಂತ್ರ್ಯಗಳಿಸಿದ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಸಾಮ್ರಾಜ್ಯಶಾಹಿಗಳನ್ನು ದೂರೀಕರಿಸುವುದರಲ್ಲಿ ನೆರವಾಗಿದೆ ಈ ದೇಶದ ಕಾರ್ಮಿಕವರ್ಗ ನಮ್ಮ ದೇಶದ ಅಲಿಪ್ತನೀತಿಯನ್ನು ರಕ್ಷಿಸಿ ಅದನ್ನು ಬಲಪಡಿಸಬೇಕು. ಇದರಿಂದಾಗಿ ವಿಶ್ವಶಾಂತಿ ಮತ್ತು ಸ್ವಾತಂತ್ರ್ಯಗಳಿಗೆ ಪರವಾದ ಶಕ್ತಿಗಳ ಕಡೆಗೆ ಭಾರತವು ತನ್ನ ಸಂಪೂರ್ಣ ಬಲವನ್ನು ನೀಡಿದಂತಾಗುತ್ತದೆ. ಮತ್ತು ನಮ್ಮ ವಿದೇಶಾಂಗ ನೀತಿಯೂ ಸ್ವತಂತ್ರ್ಯವಾಗಿಯೇ ಉಳಿದವು ನಮ್ಮ ರಾಷ್ಟ್ರೀಯ ಹಿತಾಶಕ್ತಿಗಳಿಗೆ ಅನುಕೂಲವಾಗುತ್ತದೆ.

ನಿರುದ್ಯೋಗದ ಹೊರೆ

ಕಳೆದವರ್ಷ ನಮ್ಮ ದೇಶದ ಕಾರ್ಮಿಕವರ್ಗದ ಪಾಲಿಗೆ ಅತ್ಯಂತ ತ್ರಾಸದಾಯಕವಾಗಿದ್ದ ವರ್ಷ. ಈ ಒಂದೇ ವರ್ಷದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲೆಯಾದ ನಿರುದ್ಯೋಗಿಗಳ ಸಂಖ್ಯೆ ಹಲವಾರು ಲಕ್ಷಣಗಳನ್ನು ಮೀರಿದೆ; ಒಟ್ಟು ನಿರುದ್ಯೋಗಿಗಳ ಸಂಖ್ಯೆ ಮೂರು ಕೋಟಿಗೆ ಹತ್ತಿರ ಹತ್ತಿರ. ಗ್ರಾಮಾಂತರ ನಿರುದ್ಯೋಗಿಗಳ ಸಮಸ್ಯೆ ಇನ್ನಷ್ಟು ಅಗಾಧವಾಗಿದ್ದು ಕೃಷಿ ಕಾರ್ಮಿಕರು ಮತ್ತು ಬಡರೈತರು ವಿನಾಶದ ಅಂಚಿನಲ್ಲಿದ್ದಾರೆ. ಸುಮಾರು ಏಳೂ ನೂರಕ್ಕೂ ಮಿಕ್ಕಿದ ಬೃಹತ್ ಕೈಗಾರಿಕೆ ಘಟಕಗಳು ರೋಗಗ್ರಸ್ತವಾಗಿವೆ. ರೋಗಿಷ್ಟವಾಗಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಒಂದು ಲಕ್ಷಕ್ಕೂ ಮೀರಿದೆ; ಇವುಗಳಲ್ಲಿ ಶೇ. 60ರಷ್ಟು ಕೈಗಾರಿಕೆಗಳನ್ನು ದುರಸ್ತಿಪಡಿಸಲು ಸಾಧ್ಯವೆ ಇಲ್ಲ. ದೇಶದ ಸಾಂಪ್ರದಾಯಕ ಉದ್ಯಮಗಳು ಕುಸಿದು ಬಿದ್ದಿವೆ. ಇವುಗಳೆಲ್ಲದರ ಪರಿಣಾಮ ನಿರುದ್ಯೋಗದ ಪ್ರಮಾಣದಲ್ಲಿ ಅಗಾಧ ಏರಿಕೆ, ತೀವ್ರವಾದ ಶೋಷಣೆ, ವೇತನ ಕಡಿತ, ಮತ್ತು ದುಡಿಯುವ ಜನರ ಜೀವನ ಮಟ್ಟದ ಮೇಲೆ.ಇನ್ನಿಲ್ಲದ ಅತಿಕ್ರಮಣ ಹಲವಾರು ವರ್ಷಗಳಿಂದ ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗದೆ ರೈತಾಪಿ ಜನರು ಕ್ಷಾಮಪರಿಸ್ಥಿತಿಯಿಂದ ಇನ್ನಷ್ಟು ಕಂಗೆಟ್ಟಿದ್ದಾರೆ. ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗುವಂತೆ ಕಾರ್ಮಿಕರು ಬೇಡಿಕೆಯೊಡ್ಡಬೇಕೆಂದು ಸಿ.ಐ.ಟಿ.ಯು.ಕರೆನೀಡುತ್ತದೆ. ಬರಗಾಲ ಮತ್ತು ಕ್ಷಾಮದಿಂದ ತತ್ತರಿಸಿರುವ-ರೈತರಿಂದ ಕಾಂಗ್ರೆಸ್

[5ನೇ ಪುಟ ನೋಡಿ]

ದಿಟ್ಟತನದಿಂದ ದೇಶದ ಐಕ್ಯತೆಗಾಗಿ ಹೋರಾಡಿ

(5ನೇ ಪುಟದಿಂದ)

(ಐ) ಸರ್ಕಾರಗಳು ಬಲವಂತವಾಗಿ ಸಾಲ ವಸೂಲು ಮಾಡುತ್ತಿವೆ. ಇದು ಅವರ ಸಂಕಷ್ಟವನ್ನು ದ್ವಿಗುಣಗೊಳಿಸಿದೆ. ಹಲವಾರು ರಾಜ್ಯಗಳಲ್ಲಿ ಉಪವಾಸದಿಂದ ಜನ ಸತ್ತಿರುವ ವಾರ್ತೆಗಳೂ ಬರುತ್ತಿವೆ.

ಹೊಸ ಆರ್ಥಿಕ ನೀತಿಯ ಸಂಕಷ್ಟಗಳು

ಜನತೆಯ ಸಂಕಷ್ಟಗಳನ್ನ ಪರಿಹರಿಸುವ ದೃಷ್ಟಿಯಿಂದ ರಾಜೀವ್‌ಗಾಂಧಿ ಸರಕಾರ ಈ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ಆದರೆ ಅದು ಹಾಗೆ ಮಾಡುತ್ತಾ ಇಲ್ಲ. ರಾಜೀವ್‌ಗಾಂಧಿ ಸರಕಾರ ತನ್ನ ಹೊಸ ಆರ್ಥಿಕ ನೀತಿಯ ಮೂಲಕ ಇನ್ನಷ್ಟು ಸಂಕಷ್ಟಗಳನ್ನು ತಂದೊಡ್ಡುತ್ತಾ ಇದೆ. ಉರಿಯುವ ಬೆಂಕಿಗೆ ತುಪ್ಪ ಹೊಯ್ಯುತ್ತಿದೆ. ಹೊಸ ಆರ್ಥಿಕ ನೀತಿಯ ಹೆಸರಲ್ಲಿ ಸಾರ್ವಜನಿಕ ಕ್ಷೇತ್ರವನ್ನು ಕಡೆಗಣಿಸಿ ಖಾಸಗೀ ಕ್ಷೇತ್ರಕ್ಕೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ. ತನ್ನ ಸಡಿಲ ಆಮದು ನೀತಿ, ವಿದೇಶೀ ಬಂಡವಾಳ ನಮ್ಮ ದೇಶವನ್ನು ಪ್ರವೇಶಿಸಲು ಒದಗಿಸಿರುವ ಮುಕ್ತದ್ವಾರ, ಬಂಡವಾಳಶಾಹಿಗಳಿಗೆ ಕರ, ಅಬಕಾರಿ ಸುಂಕ, ಕಸ್ಟಂ ತೆರಿಗೆ ಮತ್ತು ಲೈಸನ್ಸ್‌ನಲ್ಲಿ ರಿಯಾಯಿತಿ, ಇತ್ಯಾದಿಗಳನ್ನು ನೀಡುವ ಮೂಲಕ ರಾಜೀವ್‌ಗಾಂಧಿ ಸರಕಾರ ದೇಶೀ ಉದ್ಯಮಗಳನ್ನು ಸರ್ವನಾಶ ಮಾಡುತ್ತಿದೆ. ಇದರಿಂದಾಗಿ ಸಾವಿರಾರು ಜನ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ರಾಜೀವ್‌ಗಾಂಧಿ ಸರಕಾರ ಸಾರ್ವಜನಿಕ ಕ್ಷೇತ್ರಕ್ಕೆಸಂಬಂಧಿಸಿದಂತೆ ಅಪ್ಪಟ ಪ್ರತಿಗಾಮಿ ಧೋರಣೆ ತಳೆದಿದೆ, ಹಲವಾರು ಸಾರ್ವಜನಿಕ ಉದ್ದಿಮೆಗಳನ್ನು ಅದು ವ್ಯವಸ್ಥಿತವಾಗಿ ಮುಚ್ಚಿಸಿ ಬಿಟ್ಟಿದೆ. ಸರಬರಾಜಿನ ಹೆಚ್ಚಿನ ಬೇಡಿಕೆಗಳನ್ನು ವಿದೇಶೀ ಉದ್ದಿಮೆಗಳಿಗೆ ಉಪಾಯವಾಗಿ ವರ್ಗಾಯಿಸಿದೆ. ಇವೆಲ್ಲ ನಮ್ಮ ಆರ್ಥಿಕ ಸ್ವಾವಲಂಬನೆಯನ್ನು ಅಪಾಯದಲ್ಲಿ ಸಿಲುಕಿವೆಯಲ್ಲದೆ ರಾಷ್ಟ್ರದ ಆರ್ಥಿಕತೆಗೆ ಗಂಡಾಂತರವನ್ನು ತಂದೊಡ್ಡಿವೆ.

ಈ ಮೇ ದಿನದಂದು ವಿಶ್ವ ಶಾಂತಿ ಮತ್ತು ಅಂತರಾಷ್ಟ್ರೀಯ ಸೌಹಾರ್ದದ ಘೋಷಣೆಗಳು ಮೊಳಗಲಿ

ಈ ಭೀಕರ ಅಪಾಯದ ಅರಿವು ನಮ್ಮ ದೇಶದ ಜನಕ್ಕೆ ಇಲ್ಲ. ಆದರೆ ಜನಸಾಮಾನ್ಯರ ಪರವಾಗಿ ದೇಶದ ಕಾರ್ಮಿಕ ವರ್ಗ ಈ ಸವಾಲನ್ನು ಸ್ವೀಕರಿಸಿ ರಾಜೀವ್‌ಗಾಂಧಿ ಸರಕಾರದ ವಿನಾಶಕಾರಿ ನೀತಿಯನ್ನು ಬಹಿರಂಗಗೊಳಿಸಿದೆ. ದೇಶದ ದುಡಿಯುವ ವರ್ಗ ಜನವರಿ 21ರಂದು ಒಂದುದಿನದ ರಾಷ್ಟ್ರವ್ಯಾಪಿ ಪ್ರತಿಭಟನಾ ಮುಷ್ಕರ ಆಚರಿಸುವ ಮೂಲಕ ರಾಜೀವ್‌ಗಾಂಧಿ ಸರಕಾರ ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ನೀತಿಯ ವಿರುದ್ಧ ಜನತೆಯನ್ನು ಎಚ್ಚರಿಸಿತು. ಇಪ್ಪತ್ತು ಲಕ್ಷ ಕಾರ್ಮಿಕರೂ ಅಧಿಕಾರಿಗಳೂ ಮುಷ್ಕರ ಆಚರಿಸಿ ರಾಷ್ಟ್ರದ ಅರ್ಥವ್ಯವಸ್ಥೆಯ ಸ್ವಾವಲಂಬನೆಯನ್ನು ಕಾಪಾಡಿಕೊಳ್ಳುವ ನಿಟ್ಟನಲ್ಲಿ ತಮ್ಮ ರಾಷ್ಟ್ರೀಯ ಕರ್ತವ್ಯವನ್ನು ನಿಭಾಯಿಸಿದರು. ಇವರಿಗೆ ದೇಶದ ಎಲ್ಲ ಜನರ ಮತ್ತು ದೇಶಪ್ರೇಮಿ ಶಕ್ತಿಗಳ ಅಭಿನಂದನೆಗಳು.

ಕಳೆದ ವರ್ಷ ಕಾರ್ಮಿಕ ವರ್ಗ ಮತ್ತು ನೌಕರರು ಹಲವಾರು ಧೀರ ಹೋರಾಟಗಳನ್ನೂ ನಡೆಸಿದ್ದಾರೆ. ಫಾರ್ವರ್ಡ್ ಸೀಮೆನ್ಸ್ ಯೂನಿಯನ್ ಎಂಬ ಸಂಘಟನೆ ನೌಕಾ ಉದ್ಯಮದಲ್ಲಿ ಮಾನ್ಯತೆಗಳಿಸಿರುವ ಸಂಘ ಇದರ ಸದಸ್ಯತನದ ಪರಿಶೀಲನೆ ನಡೆಸಿಯೇ ಅದಕ್ಕೆ ಮಾನ್ಯತೆ ನೀಡಲಾಗಿತ್ತು. ಆದರೂ ನೌಕಾ ಉದ್ಯಮದ ಮಾಲೀಕರು ಈ ಸಂಘಟನೆಯ ಜೊತೆಗೆ ವ್ಯವಹರಿಸಲು ಒಪ್ಪುತ್ತಿಲ್ಲ. ಇದರ ವಿರುದ್ಧ ಈ ಯೂನಿಯನ್‌ಜೊತೆಗೆ ಮಾತುಕತೆಗೆ ಬಂದು ಅವರ ವಿವಾದವನ್ನು ಪರಿಹರಿಸುವ ನಿಟ್ಟನಲ್ಲಿ ಕೇಂದ್ರಸರಕಾರ ಏನನ್ನೂ ಮಾಡುತ್ತಾ ಇಲ್ಲ.

ಸರ್ಕಾರಿ ನೌಕರರ ಹೋರಾಟ

ಇನ್ನೂ ಅನೇಕ ಕೈಗಾರಿಕೆಗಳಲ್ಲಿ ವಿವಿಧ ಬೇಡಿಕೆಗಳಿಗಾಗಿ ಮುಷ್ಕರಗಳು ನಡೆದಿವೆ. ಸರಕಾರದ ದಬ್ಬಾಳಿಕೆಯನ್ನು ಎದುರಿಸಿ ಅವು ದೀರ್ಘಕಾಲದ ಹೋರಾಟ ಮಾಡಬೇಕಾಯಿತು. ಸರಕಾರಿ ನೌಕರರು ಮತ್ತಿತರ ವಿಭಾಗದ ನೌಕರರೂ ಕಳೆದ ವರ್ಷ ಬೃಹತ್ತಾದ ಮುಷ್ಕರಗಳನ್ನು ನಡೆಸಿದ್ದಾರೆ. ಇದರಲ್ಲೂ ಆಂಧ್ರಪ್ರದೇಶದ ಎನ್.ಜಿ.ಓ.ಗಳ ಮುಷ್ಕರ, ಉತ್ತರ ಪ್ರದೇಶ,ರಾಜಸ್ತಾನದ ಎನ್.ಜಿ.ಓ.ಗಳ ಹೋರಾಟ ಮತ್ತು ಬಿಹಾರ ರಾಜ್ಯಸರಕಾರಿ ನೌಕರರ ಭಾರಿ ಹೋರಾಟಗಳೂ ಸೇರಿವೆ. ಈ ಹೋರಾಟಗಳಲ್ಲಿ ತೋರಿಸಿದ ಅಭೂತಪೂರ್ವ ಐಕ್ಯತೆ,ಶಿಸ್ತು ಮತ್ತು ಲಕ್ಷಾಂತರ ನೌಕರರು ಒಂದಾಗಿ ನಿಂತು ಹೋರಾಡಿದ ಅವರ ಪ್ರಜ್ಞೆ,ಇವೆಲ್ಲ ಅತ್ಯಂತ ಪ್ರಶಂಸಾರ್ಹವಾದದ್ದು. ಶಾಲಾ ಶಿಕ್ಷಕರು, ಡಾಕ್ಟರುಗಳು,ಕಾಲೇಜು ಅಧ್ಯಾಪಕರು ಮತ್ತಿತರರೂ ಕಳೆದ ವರ್ಷ ಭಾರೀ ಹೋರಾಟಗಳನ್ನು ನಡೆಸಿದ್ದಾರೆ. ಬೇರೆ ಬೇರೆ ವಿಭಾಗದ ಕಾರ್ಮಿಕರ ನಡುವೆ ತಮ್ಮ ಹಿತರಕ್ಷಣೆ ಮಾಡಿಕೊಳ್ಳುವಂತೆ ಪ್ರೇರೆಪಿಸುತ್ತಿದೆ. ಸಮಸ್ತ ಕಾರ್ಮಿಕ ವರ್ಗ ಮತ್ತು ನೌಕರರು ಒಗ್ಗಟ್ಟಾಗಿ ಒಂದೇ ಸೈನ್ಯದಂತೆ ತಮ್ಮೆಲ್ಲರಿಗೂ ಸಾಮಾನ್ಯವಾಗಿರುವ ಬೇಡಿಕೆಗಳಿಗಾಗಿ ಹೋರಾಟದ ಕಣಕ್ಕೆ ಇಳಿಯುವ ದಿನಗಳು ಬಹಳ ದೂರವಿಲ್ಲ.

ಕಾರ್ಮಿಕ ಹಕ್ಕುಗಳ ಮೇಲೆ ಆಕ್ರಮಣ

ಕಾಂಗ್ರೆಸ್(ಐ) ಸರಕಾರ ಈ ಹೋರಾಟಗಳ ವಿರುದ್ಧ ಮರ್ದನ ನೀತಿಯನ್ನು ಅನುಸರಿಸುತ್ತಿದೆ. ಅವಶ್ಯಕ ಸೇವಾ ಕಾಯ್ದೆ(ESMA) ಮತ್ತು ಆಂತರಿಕ ಭದ್ರತಾ ಕಾನೂನು(MISA) ರಾಷ್ಟ್ರೀಯ ಭದ್ರತಾ ಕಾನೂನು (NSA) ನಂತಹ ಕರಾಳ ಶಾಸನಗಳನ್ನು ಮುಷ್ಕರನಿರತ ಕಾರ್ಮಿಕರು ಹಾಗೂ ಅವರ ಮುಂದಾಳುಗಳ ಮೇಲೆ ಧಾರಾಳವಾಗಿ ಪ್ರಯೋಗಿಸಲಾತ್ತಿದೆ. ಸಭೆಗಳ ಮೇಲೆ ನಿಷೇಧ ಹೇರುವುದು, ಲಾಠಿಚಾರ್ಜ್ ಮತ್ತು ಪೋಲೀಸ್ ಗೋಲಿಬಾರ್ ಇವೆಲ್ಲ ಇತ್ತೀಚಿನ ಹೋರಾಟಗಳ ಅವಿಭಾಜ್ಯ ಅಂಗಗಳಾಗುತ್ತಿವೆ. ದುಡಿಯುವ ವರ್ಗ ಮತ್ತು ಸಾಮಾನ್ಯ ಜನರ ಹೋರಾಟಗಳ ಮೇಲೆ ದಬ್ಬಾಳಿಕೆ ನಡೆಸದೇ ಇರುವ ಎರಡು ಸರಕಾರಗಳೆಂದರೆ ಪ.ಬಂಗಾಳ ಮತ್ತು ತ್ರಿಪುರಾದ ಎಡರಂಗ ಸರಕಾರಗಳು ಮಾತ್ರ.

ಕಾಂಗ್ರೆಸ್(ಐ) ಆಳ್ವಿಕೆಯಿರುವ ಪ್ರತಿಯೊಂದು ರಾಜ್ಯದಲ್ಲೂ ಕಾರ್ಮಿಕ ವರ್ಗದ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಆಕ್ರಮಣ ನಡೆಸಲಾಗಿದೆ. ಈಗಾಗಲೇ ಜ್ಯಾರಿಯಲ್ಲಿರುವ ಕಾರ್ಮಿಕ ವಿರೋಧಿ ಕಾಯಿದೆಗಳು ಸಾಲದೇನೋ ಎಂಬಂತೆ ರಾಜೀವ್‌ಗಾಂಧಿ ಸರಕಾರ ಕಾರ್ಮಿಕ ಸಂಘಗಳ ಹಕ್ಕುಗಳನ್ನು ಮೊಟಕುಗೊಳಿಸುವ ಮತ್ತು ಮುಷ್ಕರಗಳನ್ನು ನಿಷೇಧಿಸುವ ಹೊಸ ಹೊಸ ಕ್ರಮಗಳನ್ನು ಕೈಗೊಳ್ಳುತ್ತಲೇ ಇದೆ. ಕೈಗಾರಿಕಾ ವಿವಾದ ಕಾಯಿದೆಗೆ ತರಬೇಕೆಂದಿರುವ ಹೊಸ ತಿದ್ದುಪಡಿಗಳು ಈ ನಿಟ್ಟನಲ್ಲಿಯೇ ಇವೆ. ಮುಷ್ಕರ ಮಾಡುವ ಹಕ್ಕನ್ನೂ ಒಳಗೊಂಡಂತೆ ಟ್ರೇಡ್ ಯೂನಿಯನ್‌ಗಳ ಎಲ್ಲ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಕಿತ್ತುಕೊಳ್ಳುವುದು ಮತ್ತು ಕಾರ್ಮಿಕರನ್ನು ಆಡಳಿತ ವರ್ಗಕ್ಕೆ ಅಧೀನವಾಗಿರುವ ಟ್ರೇಡ್ ಯೂನಿಯನ್‌ಗಳಿಗೆ ಸೇರಿಕೊಳ್ಳುವಂತೆ ಬಲವಂತ ಮಾಡುವುದು ಈ ತಿದ್ದುಪಡಿಗಳ ಉದ್ದೇಶ. ಟ್ರೇಡ್‌ಯೂನಿಯನ್‌ಗಳಿಗೆ ಗುಪ್ತ ಮತದಾನದ ಮುಖಾಂತರ ಮಾನ್ಯತೆ ನೀಡಬೇಕೆಂಬ ತೀರಾ ಸಾಮಾನ್ಯವಾದ ಬೇಡಿಕೆಯನ್ನು ಸಹ ಇದರಲ್ಲಿ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಲಾಗಿದೆ. ಈ ಪ್ರತಿಗಾಮಿ ಸ್ವರೂಪದ ಶಿಫಾರಸುಗಳನ್ನು ಸಮಸ್ತ ಕಾರ್ಮಿಕ ವರ್ಗ ಒಕ್ಕೊರಲಿನಿಂದ ತಿರಸ್ಕರಿಸಿದೆ. ಮೇ ದಿನದಂದು ದೇಶದ ಕಾರ್ಮಿಕ ವರ್ಗ ಈ ತಿದ್ದುಪಡಿಗಳಿಗೆ ಮತ್ತೊಮ್ಮೆ ಪ್ರಬಲವಾದ ವಿರೋಧ ವ್ಯಕ್ತಪಡಿಸಿ ಪಾರ್ಲಿಮೆಂಟು ಈ ತಿದ್ದುಪಡಿಗಳನ್ನು ತಿರಸ್ಕರಿಸಬೇಕೆಂದು ಒತ್ತಾಯ ತರಬೇಕು.

ಜಾತಿ ಮತ್ತು ಕೋಮುವಾರು ಭಾವನೆಗಳನ್ನು ಮೆಟ್ಟಿನಿಂತು ದುಡಿಯುವ ಜನರ ವರ್ಗ ಐಕ್ಯತೆಯನ್ನು ದೇಶದ ಒಗ್ಗಟ್ಟನ್ನು ಕಾಪಾಡಿಕೊಳ್ಳ ಬೇಕೆಂದು ಸಿ.ಐ ಟಿ.ಯು. ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ.

ಕಾಂಗ್ರೆಸ್(ಐ) ಪಕ್ಷವು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಆಗುತ್ತಿರುವ ಆಕ್ರಮಣಗಳನ್ನು ರೈತಾಪಿ ಜನರ ಮೇಲೆ ಪೋಲೀಸ್ ದಬ್ಬಾಳಿಕೆ ಹೆಚ್ಚುತ್ತಿರುವುದನ್ನೂ ಸಿ.ಐ.ಟಿ.ಯು ಬಲವಾಗಿ ಖಂಡಿಸುತ್ತದೆ. ಬಿಹಾರ್‌ನಲ್ಲಂತೂ ಕಾಂಗ್ರೆಸ್(ಐ)ಆಡಳಿತೆಯಲ್ಲಿ ಅತ್ಯಾಚಾರಗಳು ನಡೆಯುತ್ತಲೇ ಇವೆ.

ಕಾಂಗ್ರೆಸ್(ಐ) ಆಳುತ್ತಿರುವ ಹಲವಾರು ರಾಜ್ಯಗಳಲ್ಲಿ ಹರಿಜನ ಮತ್ತು ಆದಿವಾಸಿ ಹೆಂಗಸರ ಮೇಲೆ ಅತ್ಯಾಚಾರಗಳು ದಿನನಿತ್ಯವೆಂಬಂತೆ ನಡೆಯುತ್ತಿವೆ. ಪೋಲೀಸ್‌ಠಾಣೆಗಳಲ್ಲಿ ಹೆಂಗಸರ ಮೇಲೆ ಅತ್ಯಾಚಾರ ನಡೆಯುವುದೂ ಸಾಮಾನ್ಯವಾಗಿಬಿಟ್ಟಿದೆ. ಪೋಲೀಸ್ ಕಸ್ಟಡಿಯಲ್ಲಿ ಮುಗ್ಧ ಜನರ ಸಾವು ಸಂಭವಿಸುತ್ತಿರುವುದೂ ಇಷ್ಟೇ ಸಾಮಾನ್ಯವಾಗುತ್ತಿದ್ದರೂ ಅಪರಾಧಿಗಳಿಗೆ ಯಾವುದೇ ಶಿಕ್ಷೆಯಾಗುತ್ತಿಲ್ಲ. ಕಾಂಗ್ರೆಸ್(ಐ)ಆಡಳಿತ ನಡೆಸುತ್ತಿರುವ ಎಲ್ಲ ರಾಜ್ಯಗಳಲ್ಲೂ ಕಾನೂನಿನ ಆಳ್ವಿಕೆಯನ್ನು ಗಾಳಿಗೆ ತೂರಿಬಿಟ್ಟು, ಸರ್ವಾಧಿಕಾರಿ ಆಡಳಿತೆಯನ್ನೇ ಅನುಸರಿಸಲಾಗುತ್ತದೆ.

ಎಡರಂಗ ಸರ್ಕಾರಗಳಲ್ಲಿ

ಪ ಬಂಗಾಳ ಮತ್ತು ತ್ರಿಪುರದ ಎಡರಂಗ ಸರಕಾರದ ಆಳ್ವಿಕೆಯಲ್ಲಿ ಮಾತ್ರ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂರಕ್ಷಿಸಲಾಗಿದೆ. ಈ ಎರಡೂ ರಾಜ್ಯಗಳಲ್ಲಿ ಸರಕಾರಗಳು ನಿಶ್ಚಳವಾಗಿ ಸಾಮಾನ್ಯ ಜನರ ಪರವಾಗಿ ನಿಂತಿವೆ.

ತನ್ನ ಹತ್ತುವರ್ಷಗಳ ಆಳ್ವಿಕೆಯಲ್ಲಿ ಪ.ಬಂಗಾಳದ ಎಡರಂಗ ಸರಕಾರವು ರೈತ ಮತ್ತು ಕಾರ್ಮಿಕರ ಹೋರಾಟಗಳ ವಿರುದ್ಧ ಪೋಲೀಸ್ ಪಡೆಯನ್ನು ಬಳಸಲು ನಿರಾಕರಿಸಿದೆ. ಅದಕ್ಕೆ ಬದಲಾಗಿ ಹೋರಾಟದಲ್ಲಿರುವ ಕಾರ್ಮಿಕರು ಮತ್ತುಜನಸಾಮಾನ್ಯರಿಗೆ ಈ ಸರಕಾರ ಎಲ್ಲ ರಕ್ಷಣೆಯನ್ನೂ ನೀಡುತ್ತಿದೆ.

ಜನಸಾಮಾನ್ಯರ ಹಕ್ಕುಗಳ ಮೇಲೆ ಕಾಂಗ್ರೆಸ್(ಐ) ಸರಕಾರವು ನಡೆಸುತ್ತಿರುವ ಆಕ್ರಮಣದ ವಿರುದ್ಧ ಸತತ ಹೋರಾಟ ಮಾಡಬೇಕೆಂದು ಸಿ.ಐ.ಟಿ.ಯು ದುಡಿಯುವ ಜನತೆಗೆ ಕರೆ ನೀಡುತ್ತಿದೆ. ದುಡಿಯುವ ಜನತೆ ಎಡ ಪಕ್ಷಗಳಿಗೂ ಎಡರಂಗ ಸರಕಾರಕ್ಕೂ ಪೂರ್ಣ ಬೆಂಬಲ ನೀಡಬೇಕೆಂದೂ ಕರೆ ನೀಡುತ್ತಿದೆ.

ಸೆಣಬು ಮತ್ತು ಜವಳಿ ರಾಷ್ಟ್ರೀಕರಣ

ಸೆಣಬು ಮತ್ತು ಜವುಳಿ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಸಿ ಐ.ಟಿ ಯು ಪದೇ ಪದೇ ಒತ್ತಾಯಿಸುತ್ತಿದೆ. ರಾಷ್ಟ್ರೀಕರಣ ಮಾಡುವುದರಿಂದ ಮಾತ್ರ ಈ ಕೈಗಾರಿಕೆಗಳು ತಮ್ಮ ಸ್ವಂತಕಾಲ ಮೇಲೆ ಭದ್ರವಾಗಿ ನಿಲ್ಲಲು ಸಾಧ್ಯವುತ್ತು ಅಲ್ಲಿ ಕೆಲಸ ಕಳೆದುಕೊಂಡಿರುವವರು ಮರಳಿ ಉದ್ಯೋಗ ಪಡೆಯುವುದೂ ಸಾಧ್ಯ. ಆದರೆ ರಾಜೀವ್‌ಗಾಂಧಿ ಸರಕಾರ ಈ ಬೇಡಿಕೆಯನ್ನು ತಿರಸ್ಕರಿಸಿ ಖಾಸಗಿ ಜವಳಿ ಗಿರಣಿ ಮಾಲೀಕರಿಗೂ ಸೆಣಬು ಉದ್ಯಮದ ಒಡೆಯರಿಗೂ ತಮ್ಮ ಕೈಗಾರಿಕೆಗಳನ್ನು 'ಆಧುನೀಕರಣ' ಗೊಳಿಸಲು ಅಪಾರ ಮೊತ್ತದ ಹಣ ನೀಡಿದೆ. ಈ ರೀತಿ ಹಣ ನೀಡುವಾಗ ಉದ್ಯೋಗ ಕಳೆದುಕೊಂಡಿರುವವರಿಗೆ ಮರಳಿ ಕೆಲಸ ದೊರಕಿಸಿ ಕೊಡುವ ಯಾವ ಆಶ್ವಾಸನೆಯನ್ನೂ ಪಡೆಯಲಾಗಿಲ್ಲ. ಹಾಗಾಗಿ 'ಆಧುನೀಕರಣ' ಕಾರ್ಯಕ್ರಮವೆಂದರೆ ಇನ್ನಷ್ಟು ನಿರುದ್ಯೋಗ ಹೆಚ್ಚಿಸುವ ಮತ್ತು ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗಿ ಕ್ಷೇತ್ರಕ್ಕೆ ವರ್ಗಾಯಿಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಈ ಧೋರಣೆಯ ವಿರುದ್ಧ ಪ್ರತಿಭಟಿಸಬೇಕೆಂದೂ, ನಿರುದ್ಯೋಗಿಗಳಿಗೆ ಪರಿಹಾರ ನೀಡುವಂತೆ ಮತ್ತು ದುಡಿಯುವ ಹಕ್ಕನ್ನು ಸಂವಿಧಾನದ ಮೂಲಭೂತ ಹಕ್ಕಾಗಿ ಪರಿವರ್ತಿಸುವಂತೆ ಒತ್ತಾಯಿಸಬೇಕೆಂದೂ ಸಿ.ಐ.ಟಿ.ಯು ಕಾರ್ಮಿಕರಿಗ ಕರೆ ನೀಡುತ್ತದೆ. ಈ ಎರಡು ಬೇಡಿಕೆಗಳು ಈಡೇರಿದ್ದಲ್ಲಿ ಅವು ನಿರುದ್ಯೋಗ ಭತ್ತೆ ಮತ್ತು ಉದ್ಯೋಗಕ್ಕೆ ಕುರಿತಂತೆ ನಿರುದ್ಯೋಗಿಗಳಿಗೆ ಸಾಕಷ್ಟು ಭದ್ರತೆ ನೀಡಬಲ್ಲವು.

ಪಾಕಿಸ್ತಾನದ ಜನತೆಯೊಂದಿಗೆ ಸ್ನೇಹ ಬೆಳೆಸಿ ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಎರಡೂ ರಾಷ್ಟ್ರಗಳ ಜನತೆ ಜಂಟಿಯಾಗಿ ಹೋರಾಡಬೇಕು. ಇದು ಸಿ.ಐ.ಟಿ.ಯು.ನ ಮೇ ದಿನದ ಸಂದೇಶ.

ಉಗ್ರಗಾಮಿಗಳ ವಿರುದ್ಧ ಕಾರ್ಮಿಕರು

ಖಾಲಿಸ್ತಾನಿ ಉಗ್ರಗಾಮಿಗಳ ಧಾ[illegible]ಯನ್ನೆದುರಿಸಿ ರಾಷ್ಟ್ರದ ಐಕ್ಯತೆಯನ್ನು ಕಾಪಾಡಲು ಆತ್ಮಬಲಿದಾನ ಮಾಡಿಕೊಳ್ಳುತ್ತಿರುವ ಪಂಜಾಬಿನ ಸಿ ಐ.ಟಿ ಯು ಸಂಘಟನೆಗಳು, ಅವುಗಳ ಮುಂದಾಳುಗಳು ಮತ್ತು ಕಾರ್ಮಿಕರಿಗೆ ಸಿ.ಐ.ಟಿ ಯು ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಅಸ್ಸಾಮಿನ ಪ್ರತ್ಯೇಕತಾವಾದಿಗ[illegible] ಸವಾಲನ್ನು ದಿಟ್ಟತನದಿಂದ ಎದುರಿ[illegible] ದೇಶದ ಐಕ್ಯತೆಯನ್ನುಎತ್ತಿಹಿಡಿದಿರು[illegible] ಅಲ್ಲಿನ ಕಾರ್ಮಿಕ ಸಂಘಟನೆಗಳು ಯುವ, ವಿದ್ಯಾರ್ಥಿ ಮತ್ತು ಮಹಿಳಾ ಸಂಘಟನೆಗಳನ್ನೂ ಸಿ.ಐ.ಟಿ ಯು ಅಭಿನಂದಿಸುತ್ತದೆ.

ದಾರ್ಜಿಲಿಂಗ್‌ನಲ್ಲಿ ಗೋರ್ಖಾಲ್ಯಾಂಡ್ ಚಳುವಳಿಗಾರರು ನಡೆಸುತ್ತಿರು[illegible] ಕೊಲೆ, ಸುಲಿಗೆ ಮತ್ತು [illegible] ಇತ್ಯಾದಿಗಳಿಗೆ ಮಣಿಯದೆ ರಾಷ್ಟ್ರ[illegible] ಐಕ್ಯತೆಯನ್ನು ಕಾಪಾಡಲು ಹೋರಾ[illegible]ಡುತ್ತಿರುವ ಚಹಾ ತೋಟಗಳ ಕಾರ್ಮಿ[illegible]ಕರಿಗೆ ಸಿ.ಐ ಟಿ.ಯು ನ ಹಾರ್ದಿಕ ಅ[illegible]

[6ನೇ ಪುಟ ನೋಡಿ]

ಸಿ. ಐ. ಟಿ. ಯು. ಮೇ ದಿನದ ಸಂದೇಶ

(5ನೇ ಪುಟದಿಂದ)

ಸಂಘಟನೆಗಳು. ದೇಶದ ಐಕ್ಯತೆಯ ಉಳಿವಿಗಾಗಿ ಉತ್ಸಾಹದಿಂದ ನಡೆಸುತ್ತಿರುವ ಈ ಹೋರಾಟದ ಮೇಲ್ಪಂಕ್ತಿಯನ್ನು ಇದೇ ಕಾರ್ಮಿಕ ವರ್ಗ ಅನುಸರಿಸಬೇಕೆಂದೂ ಭಾರತವನ್ನು ಒಡೆದು ದುರ್ಬಲಗೊಳಿಸಲು ಹವಣಿಸುತ್ತಿರುವ ಸಾಮ್ರಾಜ್ಯಶಾಹಿಗಳ ಯೋಜನೆಯನ್ನು ವಿಫಲಗೊಳಿಸಬೇಕೆಂದೂ ಸಿ.ಐ.ಟಿ.ಯು ಕರೆ ನೀಡುತ್ತದೆ.

ಈ ಮೇ ದಿನದಂದು ವಿಶ್ವಶಾಂತಿ ಮತ್ತು ಅಂತರಾಷ್ಟ್ರೀಯ ಸೌಹಾರ್ದದ ಘೋಷಣೆಗಳು ಮೊಳಗಲಿ. ಯುದ್ಧ ಮತ್ತು ವಿನಾಶದ ವಿರುದ್ಧ ಸಾಮ್ರಾಜ್ಯಶಾಹಿಗೆದುರು ಹೋರಾಡುತ್ತಿರುವ ಜನತೆಗೆ ಕಾರ್ಮಿಕ ವರ್ಗ ಬೆಂಬಲ ನೀಡಲಿ. ಸ್ವಾತಂತ್ರ್ಯದ ರಕ್ಷಣೆಗಾಗಿ, ಸಮಾಜವಾದದ ಸ್ಥಾಪನೆಗಾಗಿ ಮತ್ತು ಸಮಾಜವಾದಿ ರಾಷ್ಟ್ರಗಳ ಮುನ್ನಡೆಗಾಗಿ ಕಾರ್ಮಿಕ ವರ್ಗ ತನ್ನನ್ನು ಸಮರ್ಪಿಸಿಕೊಳ್ಳಲಿ. ಹೋರಾಡುತ್ತಿರುವ ಭಾರತ ಜನ ಸಮುದಾಯಗಳ, ಕಾರ್ಮಿಕ, ರೈತ, ಕೃಷಿ ಕೂಲಿಕಾರ ಮತ್ತು ನೌಕರರ ಹಿತಾಸಕ್ತಿಯ ರಕ್ಷಣೆಗಾಗಿ ಕಾರ್ಮಿಕ ವರ್ಗ ಒಂದು ಹೋರಾಡಬೇಕು. ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು, ನಿರುದ್ಯೋಗಿಗಳಿಗೆ ಪರಿಹಾರ ದೊರಕಬೇಕು. ಸಾರ್ವಜನಿಕ ಕ್ಷೇತ್ರವನ್ನು ಸಂರಕ್ಷಿಸಬೇಕು ಮತ್ತು ಸ್ವಾವಲಂಬನೆಯ ಮಾರ್ಗದಲ್ಲಿ ಮುನ್ನಡೆಯಬೇಕು. ರಾಷ್ಟ್ರದ ಐಕ್ಯತೆ, ಸ್ವಾತಂತ್ರ್ಯಗಳಿಗಾಗಿ ಹೋರಾಡಬೇಕು ಛಿದ್ರಕಾರಿ ಮತ್ತು ಕೋಮುವಾರು ಶಕ್ತಿಗಳಿಗೆ ಸೋಲುಣ್ಣಿಸಬೇಕು. ಪಾಕಿಸ್ತಾನದ ಜನತೆಯೊಂದಿಗೆ ಸ್ನೇಹ ಬೆಳೆಸಿ ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಎರಡೂ ರಾಷ್ಟ್ರಗಳ ಜನತೆ ಜಂಟಿಯಾಗಿ ಹೋರಾಡಬೇಕು. ಇದು ಸಿ. ಐ. ಟಿ. ಯು.ನ ಮೇ ದಿನದ ಸಂದೇಶ.

ಸಿ. ಐ. ಟಿ. ಯು. ಒತ್ತಿ ಹೇಳ ಬಯಸುತ್ತದೆ

ಅತ್ಯವಶ್ಯಕ ಅಂಶಗಳು

ದೇಶದಲ್ಲಿ ಇನ್ನು ಮುಂದೆ ಏನಾದರೂ ಆರ್ಥಿಕ ಪ್ರಗತಿಯಾಗಬೇಕಾದರೆ ಈ ಕೆಳಗಿನ ಅಂಶಗಳು ತೀರಾ ಅಗತ್ಯವೆಂದು ಸಿ.ಐ.ಟಿ.ಯು. ಒತ್ತಿ ಹೇಳಬಯಸುತ್ತದೆ. ಸಾರ್ವಜನಿಕ ಕ್ಷೇತ್ರವನ್ನು ಬಲಪಡಿಸಿ ಇನ್ನೂ ವಿಸ್ತರಿಸಬೇಕು. ವಿದೇಶಿ ಮತ್ತು ಭಾರತೀಯ ಹಿರಿಯ ಗುತ್ತೆದಾರಿಗಳ ಉದ್ಯಮಗಳನ್ನು ರಾಷ್ಟ್ರೀಕರಿಸಬೇಕು, ಕೈಗಾರಿಕೆಗಳ ಆಡಳಿತೆಯಲ್ಲಿ ಕಾರ್ಮಿಕರು ಆಡಳಿತ ವರ್ಗದೊಂದಿಗೆ ಸಮಾನತೆಯ ನೆಲೆಯಲ್ಲಿ ಪಾಲುಗೊಳ್ಳುವುದನ್ನು ಖಚಿತಪಡಿಸಬೇಕು ಮತ್ತು ಗುಪ್ತಮತದಾನದ ಮೂಲಕ ನಿರ್ಧರಿಸಲ್ಪಟ್ಟ ಚೌಕಾಸಿಯ ಹಕ್ಕನ್ನು ಕಾರ್ಮಿಕ ಸಂಘಗಳಿಗೆ ನೀಡಬೇಕು. ಇವುಗಳನ್ನು ಈಡೇರಿಸದಿದ್ದರೆ ಯಾವ ಪ್ರಗತಿಯೂ ಅಸಾಧ್ಯ.

ಕನಿಷ್ಟ ಕೂಲಿ

ಕನಿಷ್ಟ ಕೂಲಿಗೆ ಸಂಬಂಧಿಸಿದಂತೆ ಎಲ್ಲಾ ಕಾಯಿದೆಗಳು ಕುಸಿದು ಬಿದ್ದಿರುವುದರ ವಿರುದ್ಧ ಮತ್ತು ಕಾನೂನುಗಳ ಉಲ್ಲಂಘನೆಯಾಗುತ್ತಿರುವುದರ ವಿರುದ್ಧ ಸಿ.ಐ.ಟಿ.ಯು. ಬಲವಾಗಿ ಪ್ರತಿಭಟಿಸುತ್ತದೆ. ಇದು ಅಸಂಘಟಿತ ಕೈಗಾರಿಕೆಗಳ ಕಾರ್ಮಿಕರ ಪಾಲಿಗೆ ಅತೀವ ಸಂಕಷ್ಟವನ್ನು ತಂದೊಡ್ಡಿದೆ.

ಮಹಿಳಾ ಕಾರ್ಮಿಕರು

ಮಹಿಳಾ ಕಾರ್ಮಿಕರ ವಿರುದ್ಧ ಪಕ್ಷಪಾತ ತೋರಿಸಲಾಗುತ್ತಿರುವುದನ್ನೂ ಸಮಾನ ಕೆಲಸಕ್ಕೆ ಸಮಾನ ವೇತನವೆಂಬ ತತ್ವವನ್ನು ಗಾಳಿಗೆ ತೂರಿಬಿಡಲಾಗುತ್ತಿರುವುದನ್ನು ಮತ್ತು ಮಹಿಳಾ ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆಯಲು ವ್ಯವಸ್ಥಿತವಾಗಿ ನಡೆಯುತ್ತಿರುವ ಪ್ರಯತ್ನಗಳನ್ನು ಎಲ್ಲ ವಿಭಾಗದ ಕಾರ್ಮಿಕರೂ ವಿರೋಧಿಸಿ ಪ್ರತಿಭಟಿಸಬೇಕೆಂದು ಸಿ.ಐ.ಟಿ.ಯು. ಕರೆ ನೀಡುತ್ತವೆ.

ಬರಪೀಡಿತ ಜನರಿಗೆ ನೆರವು

ಬರ ಪೀಡಿತ ಪ್ರದೇಶದ ಜನರಿಗೆ ಶಿಕ್ಷಣ ಸಾಕಷ್ಟು ಪ್ರಮಾಣದಲ್ಲಿ ನೆರವು ನೀಡಬೇಕೆಂದೂ ಈಗಾಗಲೇ ನೀರಿನ ಕೊರತೆ ಕಂಡು ಬಂದಿರುವ ಪ್ರದೇಶದಲ್ಲಿ ಕುಡಿಯುವ ನೀರಿನ ಸರಬರಾಜು ಮಾಡಬೇಕೆಂದೂ ಸಿ.ಐ.ಟಿ. ಯು. ಒತ್ತಾಯಿಸುತ್ತದೆ. ಸರ್ಕಾರದ ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗಿಗಳಾಗಿರುವವರಿಗೆಉದ್ಯೋಗ ಹಾಗೂ ಪರಿಹಾರ ನೀಡಬೇಕೆಂದೂ ಸಿ.ಐ.ಟಿ.ಯು. ಒತ್ತಾಯಿಸುತ್ತದೆ. ವಶದಲ್ಲಿರುವ ಹೆಚ್ಚುವರಿ ಜಮೀನನ್ನು ಈ ಕೂಡಲೇ ವಿತರಣೆ ಮಾಡಬೇಕೆಂದೂ ಬಲವಂತವಾಗಿ ಸಾಲ ಮತ್ತು ಬಡ್ಡಿಯನ್ನು ಮರುವಸೂಲು ಮಾಡುವ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಒತ್ತಾಯಿಸುತ್ತದೆ.

ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸುವ ಹೋರಾಟಗಳು ಇನ್ನೂ ಪರಿಣಾಮಕಾರಿಯಾಗುವಂತೆ ಮಾಡಲು ಕಾರ್ಮಿಕ ಸಂಘಟನೆಯ ಐಕ್ಯವನ್ನು ಇನ್ನಷ್ಟು ಬಲಪಡಿಸಿಕೊಳ್ಳಬೇಕೆಂಬುದು ಸಿ.ಐ.ಟಿ.ಯು.ನ ಮೇ ದಿನದ ಕರೆ. ರಾಷ್ಟ್ರೀಯ ಆಂದೋಲನ ಸಮಿತಿ ಮತ್ತು ಅದರ ಕಾರ್ಯಕ್ರಮಗಳ ಮೂಲಕ ಈವರೆಗೆ ಸಾಧಿಸಲಾದ ಐಕ್ಯತೆಯನ್ನು ಸಿ.ಐ.ಟಿ.ಯು. ಸ್ವಾಗತಿಸುತ್ತದೆ. ಈ ಐಕ್ಯತೆಯಿಂದ ಹೆಚ್ಚು ಹೆಚ್ಚು ವಿಶಾಲ ತಳಹದಿಯ ಕಾರ್ಮಿಕರು ಮತ್ತು ನೌಕರರು ಹೋರಾಟದ ಪ್ರವಾಹದಲ್ಲಿ ಸೇರಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಆಂದೋಲನ ಸಮಿತಿಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತೃತಗೊಳಿಸಬೇಕು; ಹೊಸ ಹೊಸ ವಿಭಾಗದ ಕಾರ್ಮಿಕರು ಮತ್ತು ಈವರೆಗೂ ರಾಷ್ಟ್ರೀಯ ಆಂದೋಲನ ಸಮಿತಿಯಿಂದ ಹೊರಗುಳಿದಿರುವವರು ಅದನ್ನು ಒಳಗೊಳ್ಳುವಂತೆ ಮಾಡುವ ಮೂಲಕ ಸಮಸ್ತ ಕಾರ್ಮಿಕ ಸಂಘಟನೆಯ ಸಾಮರ್ಥ್ಯವನ್ನು ಒಂದು ಬಾವುಟದ ಅಡಿಯಲ್ಲಿ ಒಂದು ಗೂಡಿಸಿ ಹೋರಾಡುವಂತೆ ಮಾಡಬೇಕು.

ಕಾರ್ಮಿಕ ಸಂಘಟನೆಯ ಐಕ್ಯತೆಗಾಗಿ ಅನವರತ ದುಡಿಯುತ್ತಿರುವಮತ್ತು ಈ ನಿಟ್ಟಿನಲ್ಲಿ ಸಾಕಷ್ಟು ಯಶಸ್ಸನ್ನು ಪಡೆದಿರುವುದಕ್ಕಾಗಿ ಸಿ.ಐ.ಟಿ.ಯು. ತನ್ನ ಎಲ್ಲಾ ಟ್ರೇಡ್ ಯೂನಿಯನ್‌ಗಳನ್ನು ಅವುಗಳ ಪದಾಧಿಕಾರಿಗಳನ್ನೂ ಅಭಿನಂದಿಸುತ್ತದೆ; ಐಕ್ಯತೆ ಇನ್ನೂ ಬಲಗೊಳ್ಳುವಂತೆ ಮತ್ತು ಉಳಿದಿರುವವರನ್ನೂ ಅದು ಒಳಗೊಳ್ಳುವಂತೆ ಮಾಡಲು ತನ್ನ ಎಲ್ಲ ಕಾರ್ಮಿಕ ಸಂಘಗಳೂ ತಮ್ಮ ಹೋರಾಟವನ್ನು ಮುನ್ನಡೆಸಬೇಕೆಂದೂ ಸಿ.ಐ.ಟಿ ಯು. ಕರೆ ನೀಡುತ್ತದೆ.

ಕಳೆದ ವರ್ಷ ಭಾರತದ ಜನತೆ ಮತ್ತು ಕಾರ್ಮಿಕವರ್ಗ ವಿಭಜನವಾದಿ, ಪ್ರತ್ಯೇಕತಾವಾದಿ ಮತ್ತು ಕೋಮುವಾರು ಶಕ್ತಿಗಳ ವಿರುದ್ಧ ತೀವ್ರ ಹೋರಾಟ ನಡೆಸಬೇಕಾಯಿತು. ಈ ವಿಭಜನವಾದಿ, ಪ್ರತ್ಯೇಕತಾವಾದಿ ಮತ್ತು ಕೋಮುವಾರು ಶಕ್ತಿಗಳು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಡಾಂತರ ತಂದೊಡ್ಡಿರುವುದೇ ಅಲ್ಲದೆ ಅವುಗಳ ವಿರುದ್ಧ ಹೋರಾಡುವ ಇಚ್ಛಾ ಶಕ್ತಿಯನ್ನೇ ದುರ್ಬಲಗೊಳಿಸುವಂತವುಗಳು. ಇದು ಪ್ರತಿಗಾಮಿ ಶಕ್ತಿಗಳ, ಪ್ರತಿಗಾಮಿ ಮತ್ತು ಮೂಲಭೂತವಾದಿ ಸಿದ್ಧಾಂತ ಹಾಗೂ ಪ್ರಜ್ಞೆಯ ನೆರವಿನಿಂದ ಭಾರತವನ್ನು ಅಸ್ಥಿರಗೊಳಿಸಲು ಸಾಮ್ರಾಜ್ಯಶಾಹಿಗಳು ಹೂಡಿದ ಹೂಟದ ಅಂಗವಾಗಿದೆ. ಪಂಜಾಬ್, ಅಸ್ಸಾಮ್ ಮಿಂಜೋರಾಂ ಮತ್ತು ಗೂರ್ಖಾಲ್ಯಾಂಡ್ ಚಳುವಳಿಗಳಲ್ಲಿ ನಾವು ಈ ಹೊಸ ಸವಾಲನ್ನು ಸ್ಪಷ್ಟವಾಗಿ ಕಾಣಬಹುದು. ಕಾಂಗ್ರೆಸ್ (ಐ) ಆಡಳಿತವಿರುವ ರಾಜ್ಯಗಳಲ್ಲಿ ಬಾರಿ ಬಾರಿಗೂ ಭುಗಿಲೇಳುವ ಕೋಮುವಾರು ಗಲಭೆಗಳು, ತಿಕ್ಕಾಟ ಮತ್ತು ದೊಂಬಿಗಳಲ್ಲೂ ನಾವಿದನ್ನು ಕಾಣಬಹುದು ಇಂತಹ ಶಕ್ತಿಗಳ ವಿರುದ್ಧ ಸೆಣಸಾಡಬೇಕೆಂದೂ ಜಾತಿ ಮತ್ತು ಕೋಮುವಾರು ಭಾವನೆಗಳನ್ನು ಮೆಟ್ಟಿ ನಿಂತು ದುಡಿಯುವ ಜನರ ವರ್ಗ ಐಕ್ಯತೆಯನ್ನು ದೇಶದ ಒಗ್ಗಟ್ಟನ್ನೂ ಕಾಪಾಡಿಕೊಳ್ಳಬೇಕೆಂದು ಸಿ.ಐ.ಟಿ.ಯು. ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆನೀಡುತ್ತದೆ. ○

ಫೇರ್‌ಫಾಕ್ಸ್ ಹಗರಣ

(7ನೇ ಪುಟದಿಂದ)

ಬಗ್ಗೆ ಸರಕಾರ ಏಕೆ ಗಂಭೀರತೆಯಿಂದ ವರ್ತಿಸುತ್ತಿಲ್ಲ, ಸಾಮ್ರಾಜ್ಯಶಾಹಿ ದೇಶದ ಸಂಸ್ಥೆಯೊಂದಕ್ಕೆ ಅದನ್ನುಏಕೆ ವಹಿಸಲಾಯಿತು ?

★ ಈ ಸಂಸ್ಥೆಯನ್ನು ಯಾವ ರೀತಿ ಬಳಸಿಕೊಳ್ಳಲಾಗಿದೆ, ಎಷ್ಟುಹಣ ನೀಡಲಾಗಿದೆ, ಅದಕ್ಕೆ ವಹಿಸಿದ್ದ ನಿರ್ದಿಷ್ಟ ಕೆಲಸವೇನು ಹಾಗೂಸರಕಾರದ ಯಾವ ಹಂತದಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ-ಸರಕಾರದ ಅತ್ಯುನ್ನತ ವಲಯದಲ್ಲಿ ಈ ಬಗ್ಗೆ ಮಾಹಿತಿ ಇತ್ತೇ,ಪ್ರಧಾನ ಮಂತ್ರಿಗಳ ಕಛೇರಿಯನ್ನುಈ ಬಗ್ಗೆ ಸಲಹೆ ಕೇಳಲಾಗಿದೆಯೇ, ಮುಂದಿನ ತನಿಖೆಗೆ ಈ ಸಂಸ್ಥೆಗೆ ಸರಕಾರ ಏನಾದರೂ ಮಾಹಿತಿ ಒದಗಿಸಿದೆಯೇ ? ದೆಹಲಿ ಮತ್ತು ಮದ್ರಾಸಿನಲ್ಲಿ ಕೆಲವು ವ್ಯಕ್ತಿಗಳ ಬಂಧನ, ತನಿಖೆ ಏಕೆ ನಡೆಸಲಾಯ್ತು, ಹಣಕಾಸು ಇಲಾಖೆಯ ತನಿಖಾ ವಿಭಾಗದ ಉಚ್ಚಅಧಿಕಾರಿಗಳನ್ನು ಆತುರಾತುರವಾಗಿ ವರ್ಗಾಯಿಸಿದುದೇಕೆ, ಕಪ್ಪುಹಣ ಹಾಗೂ ವಿದೇಶೀ ಬ್ಯಾಂಕ್ ಖಾತೆಗಳ ವಿರುದ್ಧ ಮುಂದಿನ ಕ್ರಮ ಜರಗದಂತೆ ಮಾಡಲು ವಿ.ಪಿ. ಸಿಂಗರನ್ನು ಹಣಕಾಸು ಇಲಾಖೆಯಿಂದ ರಕ್ಷಣಾ ಇಲಾಖೆಗೆ ವರ್ಗಾಯಿಸಲಾಯಿತೆ ?

ಈ ಬಗ್ಗೆ ಸಂಸದೀಯ ಸಮಿತಿಯ ವಿಚಾರಣೆ ನಡೆಸಿದ್ದರೆ ಜನತೆಯೆದುರು ಸತ್ಯಾಂಶ ಬರುತ್ತಿತ್ತು. ಆದರೆ ಬಹುಶ ರಾಜೀವ್ ಸರಕಾರಕ್ಕೆ ಅದೇ ಬೇಕಿಲ್ಲ. ಆದ್ದರಿಂದ ಸಂಸದೀಯ ಸಮಿತಿಯಲ್ಲಿ "ರಾಜಕೀಯ ಬರುತ್ತದೆ" ಎಂಬ ವಿಚಿತ್ರ ನೆಪವೊಡ್ಡಿ ಸುಪ್ರೀಂಕೋರ್ಟಿನ ಇಬ್ಬರು ನ್ಯಾಯಾಧೀಶರುಳ್ಳ ತನಿಖಾ ಆಯೋಗವನ್ನು ನೇಮಿಸಿರುವುದಾಗಿ ಸರಕಾರ ಈಗ ಘೋಷಿಸಿದೆ.

ವಾಸ್ತವವಾಗಿ ಈ ಹಗರಣದಲ್ಲಿ ಕಾನೂನಿನ ಅಂಶವೇನೂ ಇಲ್ಲ. ಆದ್ದರಿಂದಲೇ ಕಾ| ಸೋಮನಾಥ್ ಚಟರ್ಜಿಯವರು "ಸರಕಾರ ಸಂಸತ್ತಿನಿಂದ ಏನನ್ನೋ ಬಚ್ಚಿಡಲೆತ್ನಿಸುತ್ತಿದೆ"ಎಂದು ಆಪಾದಿಸಿ ಇಂತಹ ವಿಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದೆಂದು ನ್ಯಾಯಾಂಗಕ್ಕೆ ಮನವಿ ಮಾಡಿಕೊಂಡರು. ಸುಪ್ರೀಂಕೋರ್ಟಿನ ಹಲವಾರು ವಕೀಲರು ಕೂಡಾ ಒಂದು ಹೇಳಿಕೆ ನೀಡಿ ತಪ್ಪಿತಸ್ಥರನ್ನು ಶಿಕ್ಷಿಸುವ ಅಧಿಕಾರವಿಲ್ಲದ ನ್ಯಾಯಾಂಗ ತನಿಖಾ ಆಯೋಗಗಳನ್ನು ನೇಮಿಸುವ ಸರಕಾರದ ನೀತಿಯನ್ನು ಬಲವಾಗಿ ವಿರೋಧಿಸಿದ್ದಾರೆ. "ವಿರೋಧ ಪಕ್ಷಗಳ ಬಾಯಿ ಮುಚ್ಚಿಸುವ ರಾಜಕೀಯ ದುರುದ್ದೇಶದಿಂದ ಸರಕಾರ ಇಂತಹ ಆಯೋಗಗಳನ್ನು ನೇಮಿಸುತ್ತದೆಂಬುದು ನಮ್ಮ ಅನುಭವ. ನ್ಯಾಯಾಂಗದಲ್ಲಿ ಜನತೆಯ ನಿಷ್ಠೆಯನ್ನು ಈ ರೀತಿ ಸರಕಾರ ತನ್ನ ರಾಜಕೀಯ ಉದ್ದೇಶಕ್ಕೆ ಬಳಸಲು ಅವಕಾಶ ನೀಡ ಬಾರದು" ಎಂದೂ ಹೇಳಿಕೆ ತಿಳಿಸಿದೆ.

ಸರಕಾರ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದೆ ನಿಜ ಆದರೆ ಈ ಪ್ರಕ್ರಿಯೆಯಲ್ಲಿ ಈಗಾಗಲೇ ಬೆಳಕಿಗೆ ಬಂದ ಹಲವಾರು ಅಂಶಗಳು ದೇಶದ ಆಳುವ ವರ್ಗಗಳು ಹಾಗೂ ಆಳುವ ಪಕ್ಷದ ರಾಜಕಾರಣಿಗಳ ನಡುವಿನ ಸಂಬಂಧಗಳು ಹೇಗೆ ದೇಶದ ಹಿತಾಸಕ್ತಿಗಳಿಗೆ ವಿರೋಧವಾಗಿದೆ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ. ○

ಶಿರಸಿ ರೈತರಿಂದ ಮೆರವಣಿಗೆ

ಕರ್ನಾಟಕ ಪ್ರಾಂತ ರೈತ ಸಂಘದ ಶಿರಸಿ ತಾಲೂಕು ಸಮಿತಿಯ ಆಶ್ರಯದಲ್ಲಿ ತಾಲ್ಲೂಕಿನ ರೈತರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ಏಪ್ರಿಲ್ 8ರಂದು ಮೆರವಣಿಗೆ ನಡೆಸಿದರು.

ಶಿರಸಿ ತಾಲೂಕಿನಪೂರ್ವ ಭಾಗವನ್ನು ಬರಪೀಡಿತ ಪ್ರದೇಶವೆಂದು ಸಾರಿ ಕಂದಾಯವನ್ನು ಮನ್ನಾ ಮಾಡಬೇಕು. ರೈತರ ಸಾಲವನ್ನು ರದ್ದುಗೊಳಿಸಿ, ಮುಂದಿನ ಬೆಳೆಗೆ ಅನುಕೂಲವಾಗುವಂತೆ ಚಿಕ್ಕ ಹಿಡುವಳಿದಾರರಿಗೆ ಪುನಃ ಹೊಸ ಸಾಲವನ್ನು ಮಂಜೂರು ಮಾಡಬೇಕು. ಸಣ್ಣ ನೀರಾವರಿ ಯೋಜನೆಯನ್ನು ಕಾರ್ಯಗತ ಗೊಳಿಸಬೇಕು. ರೈತರುಬೆಳೆದ ಬೆಳೆಗೆ ಯೋಗ್ಯ ಬೆಲೆ ನಿಗದಿ ಪಡಿಸಿ ಅದನ್ನು ಸರ್ಕಾರವೇ ಕೊಂಡು ಕೊಳ್ಳುವ ವ್ಯವಸ್ಥೆಯಾಗಬೇಕು, ಬರಗಾಲ ಪರಿಹಾರ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಬೇಕು. ಹಸಿರು ಕಾರ್ಡ್ ಹಂಚಿಕೆಯಲ್ಲಿ ಆಗಿರುವ ಅನ್ಯಾಯವನ್ನು ಸರಿ ಪಡಿಸಿ ಎಲ್ಲಾ ಬಡವರಿಗೂ ಅವು ಸಿಗುವಂತೆ ಮಾಡಬೇಕು, ಕೃಷಿ ಕೂಲಿಕಾರರಿಗೆ ಜೀವನಾವಶ್ಯಕ ಕನಿಷ್ಟ ಕೂಲಿ ನಿಗದಿ ಪಡಿಸಬೇಕು. ಸರ್ಕಾರಿ ಜಮೀನನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಹಕ್ಕು ಪತ್ರ ನೀಡಬೇಕು. ಎಂಬುದು ರೈತ ಸಂಘದ ಪ್ರಮುಖ ಬೇಡಿಕೆಗಳಾಗಿವೆ.

ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಶಿರಸಿ ತಾಲೂಕು ರೈತ ಸಂಘವು ರಾಜ್ಯದ ಮುಖ್ಯ ಮಂತ್ರಿಗಳಿಗೂ ಮತ್ತು ಶಿರಸಿ ಉಪವಿಭಾಗದ ಅಸಿಸ್ಟೆಂಟ್ ಕಮಿಷನರ್ ಅವರಿಗೂ ಮನವಿ ಪತ್ರವನ್ನು ಅರ್ಪಿಸಿದೆ. ●

(2ನೇ ಪುಟದಿಂದ)

ಳೆ ತನ್ನ ಗಂಡ ತಲಖ್ ತಲಖ್ ಎಂದು ಮನೆಯಿಂದ ಹೊರಗೆ ಹಾಕಿದಾಗ ಆಕೆ ಕಾಂಗ್ರೆಸ್-ಮುಸ್ಲಿಂಲೀಗ್ ಪಕ್ಷಗಳನ್ನು ಕಂಡು ಅವರಿಂದ ಸಹಾಯದೊರೆಯದೇ ಹೋದಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಕಛೇರಿಗೆ ಬಂದಳು. ಪಕ್ಷ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನ್ನ ಎಲ್ಲಾ ಘಟಕಗಳಿಗೆ ಸುತ್ತಲ ಜನತೆಗೆ ತಿಳಿಸಿ ಸಾವಿರ ಮಂದಿಯ ಒಂದು ಬೃಹತ್ ರ್‍ಯಾಲಿ ಹೊರಡಿಸಿ ಮುಸ್ಲಿಂ ಮಹಿಳೆಯ ಗಂಡನ ಮನೆ ಮುಂದೆ ಧರಣಿ ಸತ್ಯಾಗ್ರಹ ಹೋರಾಟ ಪ್ರಾರಂಭಗೊಂಡಿತು. ಪೋಲೀಸರ ಮಧ್ಯಪ್ರವೇಶವಾಗಿ ಹಲವು ದಿನದ ನಂತರ ಒಂದು ಒಪ್ಪಂದ ಏರ್ಪಟ್ಟು ತನ್ನ ಹೆಂಡತಿಯೊಡನೆ ಎಂದಿನಂತೆ ಜೀವನ ನಡೆಸುವುದಾಗಿ ತೀರ್ಮಾನಿಸಲಾಯಿತು. ಈ ಪ್ರದೇಶದ ಯಾರೇ ಅನಾರೋಗ್ಯದಿಂದ ತೊಂದರೆಗೀಡಾಗಿದ್ದರೆ ಪಕ್ಷ ಬೇಧ ಮರೆತು ಆ ವ್ಯಕ್ತಿಗೆ ಬೇಕಾದ ಸಹಾಯ ಸಹಕಾರ ನೀಡಲಾಗುವುದು. ಈ ಬಗೆಯಲ್ಲಿ ಜನತೆಯ ದಿನ ನಿತ್ಯದ ಸಮಸ್ಯೆಗಳ ಬಗ್ಗೆ ತುಂಬ ಕಾಳಜಿ ವಹಿಸುವ ಕಾರಣ ಜನರಲ್ಲಿ ಆಪಕ್ಷಗಳ ಬಗ್ಗೆ ಅಪಾರವಾದ ವಿಶ್ವಾಸ ಬೆಳೆಯಲು ಸಾಧ್ಯವಾಗಿದೆ. ರಾಜಕೀಯ ದ್ವೇಷ ಪ್ರತಿಗಳಿಗೆಂಲು ಬೆನ್ನಿಂದೆ ತೂಗಾಡುವ ಕತ್ತಿಯಂತೆ ರಾತ್ರಿಯಲ್ಲಿ ಟಾರ್ಚ್ ಇಲ್ಲದೆ ಹೊರಗೆ ಹೋಗಲು ಸಾಧ್ಯವಿಲ್ಲ. ಆಕಿತ್ತರದ ಓಣಿಗಳಲ್ಲಿ ಹೋಗುವಾಗ ಯಾವ ಮೂಲೆಯಲ್ಲಾದರೂ ದಾಳಿ ಎದುರಾಗಬಹುದು.

ಕೇರಳದ ಎಡ ಚಳುವಳಿಯ ಹತ್ತಾರು ವರ್ಷಗಳ ಚರಿತ್ರೆಯಲ್ಲಿ ತನ್ನ ನೂರಾರು ಹುತಾತ್ಮ ಸಂಗಾತಿಗಳ ಸ್ಮರಣೆಯನ್ನು ನೆನಪಿಸುವ ಸ್ಮಾರಕಗಳು ಪ್ರತಿ ವೃತ್ತಗಳಲ್ಲಿ ನಿರ್ಮಾಣವಾಗಿವೆ.

ಸರ್ವಾಧಿಕಾರಶಾಹಿ ದೇಶದಲ್ಲಿ ಬೆಳೆಯುತ್ತಿದೆ

ಇಡೀ ರಾಷ್ಟ್ರಕ್ಕೆ ಮುಖ್ಯಸ್ಥರಾದ ಅಧ್ಯಕ್ಷ ಗ್ಯಾನಿ ಜೈಲ್ ಸಿಂಗ್‌ರವರು ಯಾರನ್ನೂ ಕೇಳದೆ ಬಡಬಡನೆ ತಾನೇ ನೇಮಿಸಿದ ಪ್ರಧಾನಿ ರಾಜೀವ್‌ರವರು ಸಂಸತ್ತಿನಲ್ಲಿಯೇ ಸುಳ್ಳು ಹೇಳಿದ್ದಾರೆ ಎಂದು ಆರೋಪಿಸಿದರೆ ರಾಜೀವ್‌ಗಾಂಧಿಯವರು ನಾನು ಸುಳ್ಳು ಹೇಳಿಲ್ಲ ಎಂದು ಸಾರುತ್ತಿದ್ದಾರೆ.

ಒಟ್ಟಿನಲ್ಲಿ ಇಬ್ಬರಲ್ಲೊಬ್ಬರು ಅಥವಾ ಇಬ್ಬರೂ ಸುಳ್ಳು ಹೇಳುತ್ತಿರಬೇಕು.

ದೇಶದ ಅತ್ಯಂತ ಉಚ್ಚ ಅಧಿಕಾರಿಗಳಿಬ್ಬರ ಈ ಪರಸ್ಪರ ದೋಷಾರೋಪಣೆ ಪ್ರಜಾಸತ್ತೆಗೆ ಮಾರಕವಾದದ್ದು.

—ಕಾ॥ ಇ.ಎಂ.ಎಸ್.

ಮಾರ್ಚ್ ತಿಂಗಳ ಮೊದಲ ವಾರ. ರಾಷ್ಟ್ರಪತಿ ಭಾಷಣದ ಮೇಲೆ ಚರ್ಚೆ ನಡೆದ ಸಂದರ್ಭದಲ್ಲಿ ದೇಶದ ಸಂವಿಧಾನದಡಿಯ ಎರಡು ಅತ್ಯುನ್ನತ ಸ್ಥಾನಗಳನ್ನು–ಪ್ರಧಾನಮಂತ್ರಿ ಮತ್ತು ರಾಷ್ಟ್ರಪತಿ-ಅಂಗೀಕರಿಸಿರುವ ವರಿಷ್ಟರ ನಡುವಿನ ಸಂಬಂಧಗಳು ವಿಷಮ ಗೊಳ್ಳುತ್ತಿವೆಯೇ ಎಂಬ ಶಂಕೆಯನ್ನು ಸಂಸತ್ತಿನ ಎರಡೂ ಸದನಗಳಲ್ಲಿ ವಿರೋಧ ಪಕ್ಷಗಳ ಸದಸ್ಯರು ವ್ಯಕ್ತಪಡಿಸಿದರು. "ರಾಷ್ಟ್ರಪತಿಗಳನ್ನು ಹೊರಗಿಡುವ ಪ್ರಶ್ನೆಯೇ ಇಲ್ಲ. ದಿನನಿತ್ಯದ ಸಾಮಾನ್ಯ ಸಮಸ್ಯೆಗಳನ್ನು ಅವರಲ್ಲಿಗೆ ಒಯ್ಯುವುದಿಲ್ಲ. ಆದರೆ ಎಲ್ಲಾ ಪ್ರಮುಖ ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಪೂರ್ಣ ಮಾಹಿತಿನೀಡುತ್ತಾ ಇರುತ್ತವೆ" ಎಂದು ಸಂಸತ್ತಿನ ಎರಡೂ ಸದನಗಳಲ್ಲಿ ಚರ್ಚೆಗೆ ಉತ್ತರ ನೀಡುತ್ತಾ ಖಡಾ ಖಂಡಿತವಾಗಿ ನುಡಿದರು. ನಮ್ಮ ಪ್ರಧಾನಿ. ರಾಷ್ಟ್ರಪತಿಗಳ ಹುದ್ದೆಯ ಘನತೆ ಕಾಪಾಡುವುದರ ಬಗ್ಗೆ ಉಪದೇಶಗಳನ್ನೂ ಸುರಿದರು.

ಮಾರ್ಚ್ 13 ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ರಾಷ್ಟ್ರಪತಿ ಜೈಲ್ ಸಿಂಗ್‌ರವರು ಪ್ರಧಾನಮಂತ್ರಿ ರಾಜೀವ ಗಾಂಧಿಯವರಿಗೆ ಮಾರ್ಚ್ 9ರಂದು ಬರೆದರೆನ್ನಲಾದ ಪತ್ರ ಪ್ರಕಟವಾಯಿತು. ಇದನ್ನು ಪ್ರಧಾನ ಮಂತ್ರಿಗಳಾಗಲಿ, ರಾಷ್ಟ್ರಪತಿಗಳಾಗಲೀ ಇದುವರೆಗೆ ನಿರಾಕರಿಸಿಲ್ಲ. ತಮಗೆ ತಿಳಿದಿರುವಂತೆ ವಾಸ್ತವ ಸಂಗತಿ ನೀವು ಹೇಳಿದುದಕ್ಕಿಂತ ಸ್ವಲ್ಪ ಭಿನ್ನವಾಗಿವೆ" ಎಂದು ಹೇಳಿರುವ ಈ ಪತ್ರ ಹೇಗೆ ಸಂವಿಧಾನಾತ್ಮಕ ಪರಂಪರೆಗಳನ್ನು ಅನುಸರಿಸಲಾಗುತ್ತಿಲ್ಲ ಎರಡುಉದಾಹರಣೆ ಸಹಿತ ವಿವರಿಸುತ್ತದೆ. ಈ ಕೆಲವು ಉದಾಹರಣೆಗಳನ್ನು ನೋಡಿ

★ ಅಮೇರಿಕಾಕ್ಕೆ ಪ್ರಧಾನ ಮಂತ್ರಿಗಳ ಭೇಟಿ ಮತ್ತು ಹೋಗುವ ದಾರಿಯಲ್ಲಿ ಮಾಸ್ಕೋದಲ್ಲಿ ಸೋವಿಯೆತ್ ಮುಖಂಡರೊಂದಿಗೆ ಮಾತುಕತೆ ಇವೆರಡರ ಬಗ್ಗೆಯೂ ಮಾಹಿತಿನೀಡಲು ಕೇಳಿಕೊಂಡರೂ ರಾಷ್ಟ್ರಪತಿಗಳಿಗೆ ಆ ಬಗ್ಗೆ ಏನೂ ಹೇಳಿಲ್ಲ.

★ ಬೆಂಗಳೂರಿನಲ್ಲಿ ನಡೆದಸಾರ್ಕ್ ಸಮ್ಮೇಳನದ ಬಗ್ಗೆ ಮಾಹಿತಿ ನೀಡಿಲ್ಲ.

★ ಯುಗೋಸ್ಲಾವೀಯಾ ಗ್ರೀಸ್ ಹಾಗೂ ಪೋಲಂಡಿಗೆ ರಾಷ್ಟ್ರಪತಿಗಳ ಭೇಟಿ ನಂತರ ನೀಡಿಲ್ಲ. ಪ್ರಧಾನ ಮಂತ್ರಿಗಳು ಅವರನ್ನು ಭೇಟಿಯಾಗದ್ದರಿಂದ ತನ್ನ ಭೇಟಿಯ ಬಗ್ಗೆ ಟಿಪ್ಪಣಿಗಳನ್ನು ರಾಷ್ಟ್ರಪತಿಗಳು ಬರೆದು ಕಳಿಸಬೇಕಾಗಿ ಬಂತು.

★ ಅಸ್ಸಾಂ, ಪಂಜಾಬ್ ಮತ್ತು ಮಿಜೋರಾಂ ಒಪ್ಪಂದಗಳಿಗೆ ಸಂಬಂಧಪಟ್ಟಂತೆ ಯಾವ ಹಂತದಲ್ಲೂ ರಾಷ್ಟ್ರಪತಿಗೆ ಮಾಹಿತಿ ಒದಗಿಸಲಿಲ್ಲ.

★ ತನಿಖಾ ಆಯೋಗಗಳ ವರದಿಗಳನ್ನು ದೀರ್ಘಕಾಲದ ನಂತರವೂ ರಾಷ್ಟ್ರಪತಿಗಳಿಗೆ ಕೊಟ್ಟಿಲ್ಲ-ಇದನ್ನೂ ಗೃಹಮಂತ್ರಿಗಳಿಗೆ ತಿಳಿಸಿದ ಮೇಲೆ ಕೂಡಾ.

"ಸಂವಿದಾನದ ಪ್ರಕಾರ ರಾಷ್ಟ್ರಪತಿಗಳಿಗೆ ಮಾಹಿತಿನೀಡಬೇಕೆನ್ನುವ ಅಂಶವನ್ನು ಸರಿಯಾಗಿ ಪಾಲಿಸಲಾಗುತ್ತಿಲ್ಲ ಎಂಬುದು ಖೇದಕರ" ಎಂದು ಸ್ಪಷ್ಟವಾಗಿ ಈ ಪತ್ರ ಹೇಳುತ್ತದೆ.

ಅಂದರೆ ಪ್ರಧಾನ ಮಂತ್ರಿಗಳು ಸಂವಿಧಾನದ ಪ್ರಕಾರ ನಡೆದುಕೊಳ್ಳುತ್ತಿಲ್ಲವೇ, ಸಂಸತ್ತಿನಲ್ಲಿ ಅವರು ಸುಳ್ಳು ಮಾಹಿತಿ ನೀಡಿದರೇ ? ಸಮಸ್ತ ದೇಶದ ದುರು ಧುತ್ತೆಂದುನಿಂತ ಪ್ರಶ್ನೆಗಳಿವು ? ಸಹಜವಾಗಿಯೇ ವಿರೋಧ ಪಕ್ಷಗಳ ಸದಸ್ಯರು ಈ ಪ್ರಶ್ನೆಗಳಿಗೆ ಸಮಾಧಾನ ಬೇಕೆಂದು ಉಭಯ ಸದನಗಳಲ್ಲೂ ಸಭಾಧ್ಯಕ್ಷರ ನೆರವಿನೊಂದಿಗೆ ಒತ್ತಾಯಿಸಿದರು. ಈ ನಡುವೆ ಪತ್ರ ಪ್ರಕಟಿಸಿದ ಇಂಡಿಯನ್ ಎಕ್ಸ್‌ಪ್ರೆಸ್ ಮೇಲೆ ಸಿ.ಬಿ.ಐ. ದಾಳಿಗಳು ನಡೆದವು. ಆಳುವ ಪಕ್ಷದ ಸದಸ್ಯರು ಬೊಬ್ಬೆ ಹಾಕಿ ಇದರಿಂದ ನುಣುಚಿಕೊಳ್ಳಲು ಪ್ರಯತ್ನಿಸಿ ಎರಡು ಬಾರಿ ಸಭಾತ್ಯಾಗಗಳಾದುವು ಮಾರ್ಚ್ 19 ರಂದು ಚರ್ಚೆಗೆ ಅನುಮತಿ ನಿರಾಕರಿಸಿ ಲೋಕಸಭಾಧ್ಯಕ್ಷ ಬಲರಾಂ ಝಾಕಡ್ ನೀಡಿದ ರೂಲಿಂಗ್ ಆತ ತನ್ನ ಹುದ್ದೆಗೆ ಅವಮಾನ ಮಾಡಿ ಆಳುವ ಪಕ್ಷದ ತಾಳಕ್ಕೆ ಕುಣಿಯುತ್ತಿದ್ದರೆಂಬುದನ್ನು ಸ್ಪಷ್ಟಪಡಿಸಿತು. ರಾಷ್ಟ್ರಪತಿಗಳು ಸದನದ ಚರ್ಚೆಯ ವಿಷಯವಾಗುವುದು ಸಾಧ್ಯವಿಲ್ಲವೆಂಬುದು ಆತನ ವಾದ (ನೆವ) ವಾಗಿತ್ತು. ಆದರೆ ಇದು ಎರಡು ರೀತಿಯಲ್ಲಿ ತಪ್ಪು ವಿಚಾರ. ಮೊದಲನೆಯದಾಗಿ, ವಿರೋಧ ಪಕ್ಷಗಳು ಚರ್ಚೆ ಸಬಯಸಿದ್ದು ರಾಷ್ಟ್ರಪತಿಗಳ ಕುರಿತಲ್ಲ, ಪ್ರಧಾನ ಮಂತ್ರಿಗಳ ಪಾತ್ರದ ಬಗ್ಗೆ. ಎರಡನೇಯದಾಗಿ, ಇದೇ ಸಭಾಧ್ಯಕ್ಷರು ಕಳೆದ ವರ್ಷ ಆಳುವ ಪಕ್ಷದ ಸದಸ್ಯ ಕೆ.ಕೆ. ತಿವಾರಿಯವರು ರಾಷ್ಟ್ರಪತಿಗಳ ವಿರುದ್ಧ ಲಂಗುಲಗಾಮಿಲ್ಲದೆ ಮಾತನಾಡಲು ಅವಕಾಶ ನೀಡಿದ್ದರು. ಆಗ ಈ "ಪಾವಿತ್ರ್ಯದ"ನಿಲುವುಅವರು ತಳೆಯಲಿಲ್ಲ. !

ಮರುದಿನ ರಾಜ್ಯಸಭೆಯ ಸಭಾಪತಿಗಳೂ ಒಂದು ದೀರ್ಘ ಹೇಳಿಕೆ ನೀಡಿ ಚರ್ಚೆಗೆ ಅವಕಾಶ ನಿರಾಕರಿಸಿದರು. ಈ ದೀರ್ಘ ಹೇಳಿಕೆ ಸದಸ್ಯರು ಎತ್ತಿದ ಮುಖ್ಯ ಪ್ರಶ್ನೆಗಳನ್ನು ಬಿಟ್ಟು ಬೇರೆ ವಿಚಾರಗಳ ಬಗ್ಗೆಯಷ್ಟೇ ದೀರ್ಘ ಭಾಷಣ ಕೊರೆದಿತ್ತು. ಅವರ ನೆವ ರಾಷ್ಟ್ರಪತಿ-ಪ್ರಧಾನ ಮಂತ್ರಿಗಳ ನಡುವಿನ ವ್ಯವಹಾರಗಳು "ಗುಪ್ತ" ಎಂಬುದಾಗಿತ್ತಷ್ಟೆ. ವಾಸ್ತವವಾಗಿ ವಿರೋಧ ಪಕ್ಷಗಳು ಈ "ಗುಪ್ತತೆ"ಯನ್ನು ಪ್ರಶ್ನಿಸಿಯೇ ಇರಲಿಲ್ಲ. ಅವರಿಗೆ ಬೇಕಾಗಿದ್ದುದು ಮುಖ್ಯವಾಗಿ ಈ ಮೂರು ಅಂಶಗಳು

1 ಸಂ…ನ್ನು ಪ್ರಧಾನ ಮಂತ್ರಿಗಳು ಉದ್ದೇಶ ಪೂರ್ವಕವಾಗಿಯೇ ತಪ್ಪು ದಾರಿಗೆಳೆದಿಲ್ಲವೇ ?

2 ಪ್ರಧಾನ ಮಂತ್ರಿಗಳು ಸಂವಿಧಾನದ 78ನೇ ಕಲಂನ್ನು [ಬಾಕ್ಸ್ ನೋಡಿ] ಉಲ್ಲಂಘಿಸಿದ್ದಾರೆಯೇ ?

3 ಪ್ರಭುತ್ವದ ವಿರುದ್ಧ ಅಂಶಗಳನ್ನು, ಅವುಗಳ ನಡುವಿನ ಸಂಬಂಧಗಳನ್ನು ಚರ್ಚಿಸುವ ಸಂಸತ್ತಿನ ಹಕ್ಕನ್ನು ನಿರಾಕರಿಸಬಹುದೇ ?

ತಮ್ಮ–ತಮ್ಮ ನೆವಗಳನ್ನೊಡ್ಡಿ ಎರಡೂ ಸದನಗಳ ಸಭಾಧ್ಯಕ್ಷರು ಈ ಪ್ರಶ್ನೆಗಳನ್ನು ಮುಚ್ಚಿಹಾಕಲು ಪ್ರಯತ್ನಿಸಿದ್ದಾರೆ. ಆದರೆ ನಮ್ಮ ಸಂಸದೀಯ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವ ವ್ಯಾಪಕ ಉದ್ದೇಶದಿಂದ ಹಾಗೂ ದೇಶದ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪ್ರಶ್ನೆಗಳಿಗೆ ಉತ್ತರ ಪಡೆಯಲು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಅವಿಶ್ವಾಸ ಠರಾವು, ಲೋಕಸಭಾಧ್ಯಕ್ಷರ ಗುಲಾಮ ನಡವಳಿಕೆಗೆ ತಕ್ಕ ಪ್ರತಿಕ್ರಮ ಮುಂತಾದವುಗಳ ಮೂಲಕ ದೃಢ ನಿರ್ಧಾರ ಮಾಡಿವೆ.

ಭಾರತದಲ್ಲಿ ಪ್ರಭುತ್ವದ ಕಾರ್ಯಾಂಗ ಅಥವಾ ಮಂತ್ರಿಮಂಡಲ ಮೆಲ್ಲಮೆಲ್ಲನೇ ಹಾಗೂ ಎಡೆಬಿಡದೆ ಒಂದು ವಿಶಿಷ್ಟ ವರ್ತನೆ ಬೆಳೆಸಿಕೊಳ್ಳುತ್ತಿದೆ. ಅದನ್ನು ಸರ್ವಾಧಿಕಾರೀ ವರ್ತನೆಯೆಂದೇ ವರ್ಣಿಸಬೇಕಾಗುತ್ತದೆ. ಈ ಮೂಲಕ ಭಾರತೀಯ ಸಂವಿಧಾನದಲ್ಲಿ ಕೂಡಾ ಉಲ್ಲಂಘಿಸಲಾಗುತ್ತಿದೆ. ಈ ಪ್ರವೃತ್ತಿಯನ್ನು ಈಗಲೇ ಎದುರಿಸದಿದ್ದರೆ ಭಾರತೀಯ ಸಂವಿಧಾನವನ್ನು ಬುಡಮೇಲು ಮಾಡುವ, ಅದರ ಪ್ರಜಾಸತ್ತಾತ್ಮಕ ಹಾಗೂ ಫೆಡರಲ್ ಸ್ವಭಾವವನ್ನು ಕೈಬಿಡುವ ಅಪಾಯ ಖಂಡಿತಾ ಇದೆ. ತಮ್ಮ ರೂಲಿಂಗ್‌ಗಳ ಮೂಲಕ ಲೋಕಸಭೆಯ ಸ್ಪೀಕರ್ ಹಾಗೂ ರಾಜ್ಯ ಸಭೆಯ ಅಧ್ಯಕ್ಷರು ಸಂವಿಧಾನದ ಸಕಾರಾತ್ಮಕ ಅಂಶಗಳನ್ನುರಕ್ಷಿಸಲು ಸಂಸತ್ತಿಗೆ ಅವಕಾಶ ನಿರಾಕರಿಸಲು ನಿರ್ಧರಿಸಿರುವುದು ಅತ್ಯಂತ ವಿಷಾದನೀಯ.

—'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದಿಂದ–ಏಪ್ರಿಲ್ 5.

ಸಂವಿಧಾನದ 78ನೇ ಕಲಮು ಹೀಗೆನ್ನುತ್ತದೆ

a] ರಾಷ್ಟ್ರಪತಿಗಳಿಗೆ ದೇಶದ ಆಡಳಿತಕ್ಕೆ ಸಂಬಂಧ ಪಟ್ಟಂತೆ ಮಂತ್ರಿಮಂಡಲದ ಎಲ್ಲಾ ನಿರ್ಣಯಗಳನ್ನು, ಶಾಸನ ರಚನೆಯ ಪ್ರಸ್ತಾಪಗಳನ್ನೂ ತಿಳಿಸಬೇಕು

b] ದೇಶದ ಆಡಳಿತಕ್ಕೆ ಸಂಬಂಧ ಪಟ್ಟಂತೆ ಮತ್ತುಶಾಸನ ರಚನೆಯ ಪ್ರಸ್ತಾಪಗಳಿಗೆ ಸಂಬಂಧ ಪಟ್ಟಂತೆ ರಾಷ್ಟ್ರಪತಿಗಳು ಕೇಳಬಹುದಾದ ಯಾವುದೇ ಮಾಹಿತಿಯನ್ನು ಒದಗಿಸಬೇಕು.

ನಮ್ಮ ಅನುಭವವೇನೆಂದರೆ ಎಲ್ಲಿಯವರೆಗೆ ಪತ್ರಿಕಾರಂಗ ಆಳುವ ವರ್ಗದ ಮತ್ತುಸರಕಾರದ ಹಿತಾಸಕ್ತಿಗಳಿಗೆ ನೆರವಾಗುತ್ತದೋ ಅಲ್ಲಿಯವರೆಗೆ ಪತ್ರಿಕಾ ಸ್ವಾತಂತ್ರ್ಯವನ್ನು ಸಹಿಸಿಕೊಳ್ಳಲಾಗುತ್ತಿದೆ. ಆದರೆ ಯಾವಾಗ ಪತ್ರಿಕೆಗಳು ಈ "ಪವಿತ್ರ ನೀತಿ"ಯಿಂದ ಸ್ವಲ್ಪ ಪಕ್ಕಕ್ಕೆ ಸರಿಯುತ್ತವೆಯೋ ಪತ್ರಿಕೆಗಳ ಬಾಯಿಗೆ ಬಟ್ಟೆ ತುರುಕುವ ಕೆಲಸ ಆರಂಭವಾಗುತ್ತದೆ.

—ರಾಜ್ಯಸಭೆಯಲ್ಲಿ ಸಿ.ಪಿ.ಐ.(ಎಂ) ಸದಸ್ಯ ಕಾ। ಸುಕೋಮಲ್‌ಸೆನ್

ಫೇರ್ ಫಾಕ್ಸ್ ಹಗರಣ – ಬೂರ್ಜ್ವಾ ಆಳ್ವಿಕೆಯ ವೈಫಲ್ಯ

ರಾಷ್ಟ್ರಪತಿ-ಪ್ರಧಾನಿ ಜಗಳಕ್ಕೆ ಸಂಬಂಧಪಟ್ಟಂತೆ ಬೆಳಕಿಗೆ ಬಂದ ಇನ್ನೊಂದು ಪ್ರಕರಣ ಕಾಂಗ್ರೆಸ್(ಐ) ಸರಕಾರದ ಸರ್ವಾಧಿಕಾರಿ ಪ್ರವೃತ್ತಿಯ ಜೊತೆಗೇ ಭಾರತದ ಆಳುವವರ್ಗಗಳು ತಮ್ಮ ನಾಲ್ಕು ದಶಕಗಳ ಆಳ್ವಿಕೆಯಲ್ಲಿ ಪ್ರಭುತ್ವ ನಡೆಸಲು ಬೇಕಾದ ಕನಿಷ್ಟ ಪರಿಕರಗಳನ್ನು ಸೃಷ್ಟಿಸುವುದರಲ್ಲೂ ಹೇಗೆ ವಿಫಲಗಾಗಿ ಸಾಮ್ರಾಜ್ಯಶಾಹಿ ದೇಶಗಳ ಸಂಸ್ಥೆಗಳ ಮೇಲೆ ಅವಲಂಬಿಸಿರಬೇಕಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ.

ರಾಷ್ಟ್ರಪತಿಗಳ ಪತ್ರವನ್ನು ಪ್ರಕಟಿಸಿದ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮೂಲಕ ಗೋಯೆಂಕಾರವರ ದೆಹಲಿ ನಿವಾಸ ಹಾಗೂ ಅವರ ಹಣಕಾಸಿನ ಸಲಹೆಗಾರರ ಮನೆಯ ಮೇಲೆ ಸಿ.ಪಿ.ಐ. ಧಾಳಿ ನಡೆದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕೆಲವು ತಿಂಗಳ ಹಿಂದೆ ರಿಲೈಯನ್ಸ್ ಕಂಪನಿಯ ವಿದೇಶೀ ವಿನಿಮಯ ಶಾಸನಗಳ ಉಲ್ಲಂಘನೆಯ ಬಗ್ಗೆ ಲೇಖನ ಮಾಲೆ ಬರೆದ ಶ್ರೀ ಗುರುಮೂರ್ತಿಯವರನ್ನು ಬಂಧಿಸಲಾಯಿತು. ಸರಕಾರೀ ರಹಸ್ಯದಾಖಲೆಗಳನ್ನು ಹೊಂದಿದ್ದರೆಂಬುದು, ನಂತರ ವಿದೇಶೀ ವಿನಿಮಯ ಕಾನೂನನ್ನು ಉಲ್ಲಂಘಿಸಿ ಫೇರ್‌ಫಾಕ್ಸ್ ಎಂಬ ಅಮೇರಿಕನ್ ಖಾಸಗೀ ಗುಪ್ತಚಾರ ಸಂಸ್ಥೆಗೆ ಹಣ ನೀಡಿದ್ದರೆಂಬ ಆಪಾದನೆ ಅವರ ಮೇಲೆ ಹೋರಿಸಲಾಯಿತ್ತು. ಅದೇ ದಿನ ಹಣಕಾಸು ಇಲಾಖೆಯ ಇಬ್ಬರು ಪ್ರಮುಖ ಅಧಿಕಾರಿಗಳಾದ ಭೂರೇಲಾಲ್‌ಹಾಗೂ ವಿನೋದ್‌ಪಾಂಡೆಯವರನ್ನು ವರ್ಗಾಯಿಸಲಾಯಿತು. ಇಬ್ಬರಿಗೂ ಮಾಜೀ ಹಣಕಾಸು ಮಂತ್ರಿಗಳು ಕೆಲವು ಕೈಗಾರಿಕೋದ್ಯಮಿಗಳ ವಿರುದ್ಧ ಕೈಗೊಂಡಲೆನ್ನಲಾದ ಕ್ರಮಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರಂತೆ. ಆದರೆ ಈ ಫೇರ್ ಫಾಕ್ಸ್ ಸಂಸ್ಥೆಗೆ ಗುರುಮೂರ್ತಿಯವರು ಹಣ ನೀಡಲಿಲ್ಲ ಸ್ವತಃ ಭಾರತ ಸರಕಾರವೇ ನೀಡಿತ್ತು ಎಂಬುದು ಬೆಳಕಿಗೆ ಬಂದಿತು. ಸಂಸತ್ತಿನಲ್ಲಿ ಈ ಪ್ರಶ್ನೆ ಚರ್ಚೆಗೆ ಬಂದಾಗ ಕಾಂಗ್ರೆಸ್(ಐ) ಸದಸ್ಯರ ನಡುವೆಯೇ ತೀವ್ರ ಚಕಮಕಿ ನಡೆಯಿತು ಹಣಕಾಸಿನ ರಾಜ್ಯಮಂತ್ರಿ ಬ್ರಹ್ಮದತ್ತರು ಈ ಸಂಸ್ಥೆಯನ್ನು ನೇಮಿಸಿಕೊಂಡಿಲ್ಲ, ಅದು ಒದಗಿಸುವ ಮಾಹಿತಿಗೆ ದುಡ್ಡು ಕೊಡುತ್ತೇವೆಂದಿದ್ದೇವೆಯೇ ಹೊರತು ಇದುವರೆಗೆ ಏನೂ ಕೊಟ್ಟಿಲ್ಲ ಎಂದರು. ಆದರೆ ಮಾಜಿ ಹಣಕಾಸು ಮಂತ್ರಿ ವಿ.ಪಿ. ಸಿಂಗರು ಈ ಸಂಸ್ಥೆಯ "ನೇಮಕ"ದಲ್ಲಿ ತಮ್ಮಜವಾಬ್ದಾರಿಯ ಪಾಲೂ ಇದೆಯೆಂದರು.

ಸಿ.ಬಿ.ಐ ತನ್ನ ಆಪಾದನೆಗೆ ಸಾಕ್ಷಿಯಾಗಿ ಸಲ್ಲಿಸಿದ ತನ್ನ ಸಂಸ್ಥೆಯದೆನ್ನಲಾದ ಪತ್ರ ಖೋಟಾ ಪತ್ರವೆಂದ ಫೇರ್‌ಫಾಕ್ಸ್ ಸಂಸ್ಥೆ ಭಾರತ ಸರಕಾರ ತಮ್ಮನ್ನು ಕೆಲವು ರಹಸ್ಯಮಾಹಿತಿ ಸಂಗ್ರಹಕ್ಕೆ 'ನೇಮಿಸಿ' ಕೊಂಡಿದೆಯೆಂದರು. ಯಥಾ ಪ್ರಕಾರ ಆಳುವ ಪಕ್ಷದ ಸೊತ್ತಿನಂತೆ ವರ್ತಿಸುತ್ತಿರುವ ಸಭಾಧ್ಯಕ್ಷರು ಮಂತ್ರಿಗಳ ವಿರುದ್ಧ ಹಕ್ಕುಚ್ಯುತಿಗೆ ಅವಕಾಶ ನಿರಾಕರಿಸಿ ಸಂಸತ್ತಿನಲ್ಲಿ ಕೋಲಾಹಲ ಉಂಟಾಗುವಂತೆ ಮಾಡಿದರು.

ಸಂಸತ್ತಿನಲ್ಲಿ ಈ ಬಗ್ಗೆ ಮಾತನಾಡುತ್ತಾ ಸಿ.ಪಿ.ಐ.(ಎಂ)ನ ಸದಸ್ಯ ಕಾ॥ ಸೋಮನಾಥ ಚಟರ್ಜಿಯವರು ಹೇಳಿರುವಂತೆ ಈ ಹಗರಣದ ಬಗ್ಗೆ ದೇಶದ ಜನತೆ ತಿಳಿಯಬೇಕಾದ ಕೆಲವು ಮುಖ್ಯ ಅಂಶಗಳು ಇವು—

★ ಈ ದೇಶದಲ್ಲಿರಬೇಕಾಗಿದ್ದ ಕೋಟ್ಯಾನು ಕೋಟಿ ರೂಪಾಯಿಗಳು ಬೇರೆ ಲ್ಲೋ ಇವೆಯೆಂಬ ಗುಮಾನಿ ವಿಚಾರದ

(೯ನೇ ಪುಟ ನೋಡಿ)

REG No. BGW-148 MAG (2) PRB DECR 319/78-79

ಕೋಟೇಶ್ವರ : ಜನತಾ ಸದಸ್ಯರಿಂದ ಕಾಂಗ್ರೆಗೆ ಮತ

ಸಿ.ಪಿ.ಐ.(ಎಂ) ಮತ್ತು ಜನತಾ ಒಡಂಬಡಿಕೆಯಂತೆ ಕೋಟೇಶ್ವರ ಮಂಡಲ ಪಂಚಾಯಿತ್ತಿಗೆ ಸಿ.ಪಿ.ಐ.(ಎಂ)ನ ಅಭ್ಯರ್ಥಿಯಾದ ಕಾ| ವೆಂಕಟೇಶ್‌ನಾಯಕ್ ಪ್ರಧಾನರಾಗಿಯೂ ಜನತಾ ಅಭ್ಯರ್ಥಿ ಗೋಪು ಪೂಜಾರಿಯವರು ಉಪ ಪ್ರಧಾನರಾಗಬೇಕಾಗಿತ್ತು. ಒಟ್ಟು ಸ್ಥಾನಗಳು 29. ಸಿ.ಪಿ.ಐ (ಎಂ) ಬೆಂಬಲಿತ 10ಸದಸ್ಯರು, ಜನತಾ ಪಕ್ಷದ 8ಸದಸ್ಯರು, ಕಾಂಗ್ರೆ 9ಸದಸ್ಯರು ಹಾಗೂ 2ಮಂದಿ ಪಕ್ಷೇತರರು.

ಸಿ.ಪಿ.ಐ.(ಎಂ)ನ ಅಭ್ಯರ್ಥಿ ಪ್ರಧಾನರಾಗಿ ಆಯ್ಕೆಯಾಗುವುದನ್ನು ಸಹಿಸದ ಕಾಂಗ್ರೆ ಪುಡಾರಿಗಳು ಎಲ್ಲಾ ಅಶೆ ಆಮಿಷಗಳಿಗೆ ಒಳಪಡಿಸಿ ಜನತಾದ 4 ಮಂದಿ ಸದಸ್ಯರನ್ನು ಅವರತ್ತ ಸೆಳೆಯಲು ಕಾಂಗ್ರೆಯವರೇ ಪ್ರಧಾನರಾಗಿ ಪಕ್ಷಾಂತರಿ ಜನತಾ ಸದಸ್ಯ ಉಪಪ್ರಧಾನರಾಗಿ ಆಯ್ಕೆಯಾಗುವ ನಾಚಿಕೆಗೇಡಿನ ಘಟನೆ ನಡೆಯಿತು. ಸಿ ಪಿ.ಐ.(ಎಂ) ಹಾಗೂ ಜನತಾರಂಗಕ್ಕೂ 14 ಮತಗಳೂ ಕಾಂಗ್ರೆಸ್ ಹಾಗೂ ಪಕ್ಷಾಂತರಿಗಳ ಕೂಟಕ್ಕೆ 15 ಮತಗಳೂ ದೊರೆತವು. ಜನತಾ ಸದಸ್ಯರಿಂದಲೇ ಜನತಾ ಪಕ್ಷದ ತೀರ್ಮಾನ ಹಾಗೂ ಒಡಂಬಡಿಕೆಯನ್ನು ಮುರಿದು ದ್ರೋಹದ ಕೆಲಸ ನಡೆದುದಾಗಿದೆ.

ಸಾರ್ವಜನಿಕರ ಪ್ರತಿಭಟನೆ

ಇದರಿಂದ ಉದ್ರಿಕ್ತ ವಾತಾವರಣ ಉಂಟಾಗಿ ತೀವ್ರ ಪ್ರತಿಭಟನೆ ವ್ಯಕ್ತಪಟ್ಟಾಗ ಪೋಲೀಸರು ಲಾಠಿ ಪ್ರವಾಹ ಹಾಗೂ ಅಶ್ರುವಾಯು ಸಿಡಿಸಿ ಹಲವಾರು ಮಂದಿ ಗಾಯಗೊಳ್ಳುವಂತಾಯಿತು. ಜನತಾ ಪಕ್ಷದ ಸೂಚನೆ ಮೀರಿ ವಿರೋಧ ಪಕ್ಷವಾದ ಕಾಂಗ್ರೆಸ ಅಭ್ಯರ್ಥಿಗೆ ಮತ ನೀಡುವ ಜನತಾದ ನಾಲ್ಕು ಮಂದಿ ಸದಸ್ಯರನ್ನು ವಜಾ ಮಾಡಲು ಸಂಬಂಧಪಟ್ಟ ಸಮಿತಿ ಶಿಫಾರಸ್ಸುಮಾಡಲಾಗಿವೆ ಅಂತ ತಿಳಿದು ಬಂದಿವೆ. ●

ಕಾಂಗ್ರೆಸ್ [ಐ] ಕೈಯಲ್ಲಿ ಪ್ರಜಾಪ್ರಭುತ್ವ

(1ನೇ ಪುಟದಿಂದ)

ಇದನ್ನು ವಿದೇಶಾಂಗ ಇಲಾಖೆಯ ಕಾರ್ಯದರ್ಶಿಯನ್ನು ಬದಲಾಯಿಸಿದ್ದರಲ್ಲಿ, ವಿದೇಶ ನೀತಿಯ ಉಚ್ಚ ಸಮಿತಿಯ ಅಧ್ಯಕ್ಷರಾದ ಜಿ.ಪಾರ್ಥಸಾರಥಿಯವರ ರಾಜೀನಾಮೆ ಮುಂತಾದ ವಿಷಯಗಳಲ್ಲಿ ಕಾಣಬಹುದು.

ನಮ್ಮ ದೇಶದ ಒಳಗಡೆಯಲ್ಲಿ ವಿಚ್ಛಿದ್ರಕಾರಿಗಳು ತೀವ್ರವಾಗಿ ಹೆಚ್ಚುತ್ತಿರುವಾಗ ಹೊರಗಡೆಯಲ್ಲಿ ರಕ್ಷಣೆಗೆ ಅಮೇರಿಕನ್ ಸಾಮ್ರಾಜ್ಯಶಾಹಿಯಿಂದ ತೀವ್ರ ಅಪಾಯ ತಟ್ಟುತ್ತಿರುವಾಗ ನಮ್ಮ ವಿದೇಶಾಂಗ ನೀತಿಯ ಅಡಿಗಲ್ಲುಗಳಾದ ಅಲಿಪ್ತನೀತಿ, ವಿಶ್ವಶಾಂತಿ, ದ.ಆಫ್ರಿಕಾ ಹೋರಾಟಗಳೇಮೊದಲಾದ ವಿಮೋಚನಾ ಹೋರಾಟಗಳಿಗೆ ಬೆಂಬಲ ಮೊದಲಾದ ಅಂಶಗಳನ್ನು ವಿರೋಧಿಸುವ ಅಂಶಗಳು ಬೆಳೆಯುತ್ತಿವೆ. ಇಂತಹ ವಾತಾವರಣದ ಬಗ್ಗೆ ಜನತೆ ಜಾಗರೂಕರಾಗಿರಬೇಕು ಎಂದರು ಕಾಂ. ಸಮರ ಮುಖರ್ಜಿಯವರು. ●

ಕುಂದಾಪುರ : ಎರಡನೇ ಡಿ. ವೈ. ಎಫ್. ಐ. ಸಮ್ಮೇಳನ

"ಜಾತಿ, ಮತ ಮತ್ತು ಧರ್ಮದ ಹೆಸರಿನಲ್ಲಿ ಯುವ ಜನತೆ ಸಂಕುಚಿತರಾಗುವುದರಿಂದ, ಯುವ ಶಕ್ತಿ ಕೋಮುವಾದಕ್ಕೆ ಬಲಿಯಾಗುವ ಅಪಾಯ ಕಂಡು ಬರುತ್ತಿದೆ. ನಿರುದ್ಯೋಗ ಸಮಸ್ಯೆ ಯುವ ಜನತೆಯನ್ನು ಕಾಡುತ್ತಿದ್ದು ಬಂಡವಾಳಶಾಹಿ ದೇಶಗಳ ಅನಿವಾರ್ಯಕೂಸು ಇದಾಗಿದೆ. ಜಾತ್ಯಾತೀತ ನೆಲೆಯಲ್ಲಿ ಯುವ ಜನತೆ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ಹೋರಾಟ ನಡೆಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ಈ ನಿಟ್ಟನಲ್ಲಿ ಹೋರಾಡುವ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಶನ್ (ಡಿ.ವೈ ಎಫ್.ಐ.) ಕಳೆದ 6 ವರ್ಷಗಳಲ್ಲಿ 43 ಲಕ್ಷಕ್ಕೂ ಮೀರಿ ಸದಸ್ಯತ್ವವನ್ನು ಹೊಂದಿದ ಏಕೈಕ ಬಲಿಷ್ಟ ಪ್ರಗತಿ ಪರ ಯುವ ಜನತೆ ಸಂಘಟನೆಯಾಗಿ ಬೆಳೆದು ಬಂದಿದೆ." ಎಂದು ಡಿ.ವೈ.ಎಫ್.ಐ. ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ನಾಗೇಶ್ ಕುಮಾರ್‌ರವರು ಮಾರ್ಚ್ 29 ರಂದು ಕೋಣಿ ಗ್ರಾಮ ಪಂಚಾಯತ್ ಕಚೇರಿ ಪಠಾರದಲ್ಲಿ ಜರಗಿದ ಕುಂದಾಪುರ ತಾಲ್ಲೂಕು ಡಿ.ವೈ ಎಫ್. ಐ. 2ನೇ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಾ ಹೇಳಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಕುಂದಾಪುರ ತಾಲೂಕು ಡಿ.ವೈ.ಎಫ್. ಐ. ಉಪಾಧ್ಯಕ್ಷ ಕೆ. ವೆಂಕಟೇಶ್ ನಾಯಕ್‌ರವರು ವಹಿಸಿದ್ದರು.

ಡಿ.ವೈ.ಎಫ್.ಐ. ಕುಂದಾಪುರ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ನಡೆಸಿದ ಚಟುವಟಿಕೆಯ ಸುದೀರ್ಘ ವರದಿಯನ್ನು ಕುಮಾರಿ ಉತ್ಕಲರವರು ಸಭೆಯಲ್ಲಿ ಮಂಡಿಸಿದರು. ವರದಿಯನ್ನು ಆಧರಿಸಿ ಎಂಟು ಮಂದಿ ಪ್ರತಿನಿಧಿಗಳು ಚರ್ಚೆ, ವಿಮರ್ಶೆಯಲ್ಲಿ ಭಾಗವಹಿಸಿದರು.

ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಬಡ ರೋಗಿಗಳಿಂದ ಅಕ್ರಮ ಲಂಚದ ಸುಲಿಗೆ, ನೈರ್ಮಲ್ಯ, ಅನ್ಯವಸ್ಥೆ ಮತು ಆಂಬ್ಯುಲೆನ್ಸ್ ಇಲ್ಲದಿರುವ ಬಗ್ಗೆ ಖಂಡಿಸಿ, ಮೇಲಾಧಿಕಾರಿಗಳ ಮತ್ತು ಸರಕಾರದ ಮೇಲೆ ಒತ್ತಾಯ ತರುವ ಬಗ್ಗೆ ಮತ ಪ್ರದರ್ಶನ ನಡೆಸುವುದು ಮತ್ತು ಪ್ರತ್ಯೇಕ ಸರಕಾರ ಹೆರಿಗೆ ಆಸ್ಪತ್ರೆ ಸ್ಥಾಪನೆ, ಕುಂದಾಪುರ ಪುರಸಭೆಯ ವತಿಯಿಂದ ಒಳಚರಂಡಿ ಮಾಡುವ ಕುರಿತು, ಪದ್ಮಲತಾ ಮತ್ತು ಲೋಕಯ್ಯ ಪೂಜಾರಿ ಇವರ ನಿಗೂಢ ಕೊಲೆಯನ್ನು ಖಂಡಿಸಿ, ನ್ಯಾಯಾಂಗ ತನಿಖೆಗೆ ಒತ್ತಾಯ, ದಕ್ಷಿಣ ಆಫ್ರಿಕಾ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ, ಕರಿಯರ ನಾಯಕ ನೆಲ್ಸನ್ ಮಾಂಡೇಲರ ಬಿಡುಗಡೆಗೆ ಒತ್ತಾಯ ಇತ್ಯಾದಿ ಠರಾವುಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಕೋಣಿ ವೆಂಕಟೇಶ್ ನಾಯಕ್ (ಅಧ್ಯಕ್ಷ) ಕೆ. ನಾರಾಯಣ ಆಡಾರ್ [ಕಾರ್ಯದರ್ಶಿ] ಮಹಾಬಲ ಎ. ಗಣಪು ಬಂಗೇರ, ವಿ ಗಣೇಶ್ ಕಾರಂತ [ಉಪಾಧ್ಯಕ್ಷ] ಸುಧಾಕರ, ಗೋವಿಂದ ಎಂ. ಎಚ್. ನರಸಿಂಹ [ಜೊತೆಕಾರ್ಯದರ್ಶಿ]ಕುಮಾರಿ ಉತ್ಕಲ[ಖಜಾಂಗಿ] ಇವರನ್ನೊಳಗೊಂಡ 32 ಮಂದಿ ತಾಲೂಕು ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ○

ಧರಣಿ ಸತ್ಯಾಗ್ರಹ

ಸಿ. ಐ. ಟಿ. ಯು. ರಾಜ್ಯ ಮಂಡಳಿ ಸಭೆಯ ತೀರ್ಮಾನದಂತೆ ಹಾಸನದ ಕಾಫಿಕ್ಯೂರಿಂಗ್', ಸಾಮಿಲ್ಸ್ ಮತ್ತು ಇತರ ಕಾರ್ಮಿಕರ ಸಂಘವು ಮಾ.12ರಿಂದ ಒಂದುವಾರ ಕಾಲ ರಾಜ್ಯಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಸಹಿ ಸಂಗ್ರಹ ಕಾರ್ಯಕ್ರಮ ನಡೆಸಿತು. ಮಾ.26ರಂದು ಸಂಘದ ನೂರಾರು ಕಾರ್ಯಕರ್ತರು ಉಪ ಕಾರ್ಮಿಕ ಆಯುಕ್ತರ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಕಾ| ವಿ. ಸುಕುಮಾರ್, ಕಾ||ಕೆ. ಟಿ. ರಂಘವೇಂದ್ರ ಮತ್ತು ಕಾ| ಜಿ.ಪಿ. ಸತ್ಯನಾರಾಯಣ ಇದರ ನೇತೃತ್ವ ವಹಿಸಿದ್ದರು.

ಬೇಲೂರಿನಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರ, ಕಛೇರಿಯ ಮುಂದೆ ಕಾ| ಎಂ. ಎಸ್. ಸೋಮಶೇಖರ ಅವರ ನೇತೃತ್ವದಲ್ಲಿ ಲಕ್ಷ್ಮಿ ಸಾಮಿಲ್ಸ್‌ನ ಕಾರ್ಮಿಕರು ಮತ್ತು ತೋಟ ಕಾರ್ಮಿಕರು ಧರಣಿ ಸತ್ಯಾಗ್ರಹ ನಡೆಸಿದರು.

ಸಕಲೇಶಪುರದಲ್ಲಿ ಕಾ| ಕೆ. ಕೃಷ್ಣ ಮತ್ತು ಕಾ|| ದೂಜರವರ ನೇತೃತ್ವದಲ್ಲಿ ವಿವಿಧ ತೋಟಗಳ ಕಾರ್ಮಿಕರು ಧರಣಿ ಸತ್ಯಾಗ್ರಹ ನಡೆಸಿರುವುದಾಗಿ ಕಾ| ವಿ. ಸುಕುಮಾರ್ ವರದಿ ಮಾಡಿದ್ದಾರೆ.

ಸಂತಾಪ ಸೂಚನೆ

ಸಿ.ಪಿ.ಐ.[ಎಂ] ಗುಜರಾತ್ ರಾಜ್ಯಸಮಿತಿಯ ಕಾರ್ಯದರ್ಶಿಯಾಗಿದ್ದ ಕಾ|| ಚಂದುಭಾಯಿ ಪಟೇಲ್‌ಅವರು ದೀರ್ಘಕಾಲದ ಅನಾರೋಗ್ಯದಿಂದಾಗಿ ಏಪ್ರಿಲ್1ರಂದು ನಿಧನರಾಗಿದ್ದಾರೆ. ಕಾ|| ಚಂದುಭಾಯಿ ಪಟೇಲ್‌ರವರು 1978ರಿಂದ ಕೇಂದ್ರ ಸಮಿತಿ ಸದಸ್ಯರಾಗಿದ್ದರು. ಅವರು ಗುಜರಾತ್ ಕಿಸಾನ್ ಸಭಾದ ಅಧ್ಯಕ್ಷರಾಗಿದ್ದರು. ಗುಜರಾತ್‌ನಲ್ಲಿ ರೈತ ಚಳುವಳಿ,ಕಾರ್ಮಿಕರ ಸಂಘಟನೆ ಹಾಗೆಯೇ ಪಕ್ಷದ ಬೆಳವಣಿಗೆಗಾಗಿ ಅವರು ನಿರಂತರ ಶ್ರಮಿಸಿದ್ದಾರೆ. ಅವರ ಅಕಾಲಿಕ ನಿಧನಕ್ಕೆ ಕರ್ನಾಟಕ ರಾಜ್ಯಸಮಿತಿ ತನ್ನ ಸಂತಾಪ ಸೂಚಿಸುತ್ತದೆ.

ಓದುಗರ ಗಮನಕ್ಕೆ

★ ಐಕ್ಯರಂಗ ಮೇ ವಿಶೇಷಾಂಕದ ಕೆಲಸದಿಂದಾಗಿ ತಾ. 26-4-87ರ ಸಂಚಿಕೆ ಪ್ರಕಟವಾಗುತ್ತಿಲ್ಲ. ಏಪ್ರಿಲ್ 26 ಮತ್ತು ಮೇ 3ರ ಸಂಚಿಕೆಗಳನ್ನು "ಮೇ ವಿಶೇಷಾಂಕ" ವನ್ನಾಗಿ ಪ್ರಕಟಿಸಲಾಗುವುದು. ಓದುಗರೂ ಏಜಂಟರೂ ಇದನ್ನು ಗಮನಿಸಬೇಕಾಗಿ ವಿನಂತಿ.

—ಸಂಪಾದಕ ಮಂಡಳಿ

ಈ ವಾರ....

★ ಪ್ರಧಾನ ಮಂತ್ರಿಗಳಿಗೆ ಧೈರ್ಯವಿದ್ದರೆ ಫೇರ್‌ಫ್ಯಾಕ್ಸ್ ಘಟನೆಯ ಸಾಮೂಹಿಕ ಜವಾಬ್ದಾರಿಯನ್ನು ಅವರು ಒಪ್ಪಿಕೊಳ್ಳುವುದು ಅಗತ್ಯ........ಫೇರ್‌ಫ್ಯಾಕ್ಸ್ ಜನತೆಗೆ ವ್ಯವಹಾರಗಳನ್ನು ಸಂಪುಟಕ್ಕೆ ತಿಳಿಸದೇ ವಿ.ಪಿ. ಸಿಂಗ್ ಸರಿಯಾದ ವರ್ತನೆ ತೋರಿಸಿಲ್ಲವಾದರೆ, ಪ್ರಧಾನ ಮಂತ್ರಿಗಳು ಕೂಡಾ ಫೇರ್‌ಫ್ಯಾಕ್ಸ್ ನೀಡಿದ ಮಾಹಿತಿಯನ್ನು ಸಂಸತ್ತಿಗೆ ತಿಳಿಸದೆ ತಪ್ಪಾಗಿ ವರ್ತಿಸಿದ್ದಾರೆ.

-ರಾಜ್ಯಸಭೆಯಲ್ಲಿ ಕಾಂ. ದಿಪೇನ್‌ಘೋಷ್, ಎ.15

★ ಐ.ಎಂ.ಎಫ್. ತಯಾರಿಸಿದ ವರದಿಗಳ ಪ್ರಕಾರ ಜಗತ್ತಿನ ಆರ್ಥಿಕ ಭವಿಷ್ಯ ಮಂಕಾಗಿದೆ. ಅದರ ಪ್ರಕಾರ ಮುಂದುವರಿದ ಬಂಡವಾಳಶಾಹೀ ದೇಶದ ಬೆಳವಣಿಗೆ ದರ 1985ರ 3.25% ದಿಂದ 1986ರಲ್ಲಿ 2.5%ಕ್ಕಿಳಿದಿದೆ. 1987ರಲ್ಲಿ ಅದು 2.25 ಕ್ಕಿಳಿಯುವ ಸಂಭವವಿದೆ.

ಪಿ.ಟಿ.ಐ. ಸುದ್ದಿ, ಎ.12

★ **ಕಳೆದ ಜನವರಿಯಿಂದ ತನ್ನ ನ್ಯಾಯ ನಿಷ್ಠೆಯ ಮೇಲೆ ತೀವ್ರ ಆಪಾದನೆಗಳನ್ನು ಮತ್ತು ಶಂಕೆಗಳನ್ನು ರಾಜೀವ ಗಾಂಧಿಯವರು ಪುಷ್ಟೀಕರಿಸಿದಷ್ಟು ಬೇರಾವ ಪ್ರಧಾನ ಮಂತ್ರಿಯೂ ಮಾಡಿಲ್ಲ.**

-ಇಂಡಿಯನ್ ಎಕ್ಸ್‌ಪ್ರೆಸ್, ಎ.13

★ ವಿಶ್ವಸಂಸ್ಥೆಯಲ್ಲಿ ಭದ್ರತಾ ಸಮಿತಿಯೂ ನಮೀಬಿಯಾದ ಸ್ವಾತಂತ್ರ್ಯಕ್ಕೆ ದಕ್ಷಿಣ ಆಫ್ರಿಕಾ ಅಡ್ಡಗಾವಲು ಹಾಕುತ್ತಿರುವುದನ್ನು ಖಂಡಿಸುವ ಅಲಿಪ್ತ ದೇಶಗಳ ನಿರ್ಣಯ 9-3 ಬಹುಮತ ಪಡೆದರೂ ಅಮೇರಿಕಾ ಮತ್ತು ಇಂಗ್ಲೆಂಡ್ ತಮ್ಮ ವಿಟೋ ಅಧಿಕಾರ ಬಳಸಿ ಅದನ್ನು ವಿಫಲಗೊಳಿಸಿದ್ದಾರೆ. ಇಟಲಿ ಫ್ರಾನ್ಸ್ ಮತ್ತು ಜಪಾನ್ ಮತದಾನದಲ್ಲಿ ಭಾಗವಹಿಸಲಿಲ್ಲ. ವಿರುದ್ಧ ಮತನೀಡಿದ ಇನ್ನೊಂದು ದೇಶವೆಂದರೆ ಪಶ್ಚಿಮ ಜರ್ಮನಿ.

ಯು.ಎನ್ ಐ. ಸುದ್ದಿ, ಎ.11

★ **ಎರಡು ತಿಂಗಳ ಹಿಂದೆ ಹಣಕಾಸಿನ ಖಾತೆಯಿಂದ ರಕ್ಷಣಾ ಖಾತೆಗೆ ವಿ.ಪಿ. ಸಿಂಗರ ವರ್ಗಾವಣೆ ಗಡಿ–ಸಂಬಂಧದ ಬೆಳವಣಿಗೆಗಳಿಂದಾಗಿ ಮಾಡಬೇಕಾಯಿತು ಎಂದು ಬಣ್ಣಿಸುವ ಪ್ರಧಾನ ಮಂತ್ರಿಗಳ ಪ್ರಯತ್ನ ಈಗ ಬಯಲಾಗಿದೆ. ಶ್ರೀಮಾನ್ ಸಿಂಗ್‌ರವರ ವರ್ಗಾವಣೆಯ ನಂತರ ಹಣಕಾಸಿನ ಇಲಾಖೆಯ ಪ್ರಮುಖ ಅಧಿಕಾರಿಗಳ ವಿರುದ್ಧ ಕೈಗೊಂಡಕ್ರಮಗಳಿಗೂ, ಅವರು ಆರಂಭಿಸಿದ ತನಿಖೆಗಳಿಗೂ ಸಂಬಂಧವಿಲ್ಲ ಎಂಬ ಮಾತನ್ನು ಈಗ ಯಾರೂ ನಂಬಲು ಸಾಧ್ಯವಿಲ್ಲ.**

-ಡೆಕ್ಕನ್ ಹೆರಾಲ್ಡ್, ಎ.13

★ ದೇಶ ಸಧ್ಯದಲ್ಲೇ ಸಂಪನ್ಮೂಲಗಳ ತೀವ್ರ ಕೊರತೆ ಎದುರಿಸಬೇಕಾಗುತ್ತದೆ ಎಂದು ಇಂಜಿನಿಯರಿಂಗ್ ಉದ್ಯಮಗಳ ಒಕ್ಕೂಟ ಎಚ್ಚರಿಕೆ ನೀಡಿದೆ. ಇದು ಸರ್ಕಾರೀ ಖರ್ಚಿನ ಮೇಲೆ ತೀವ್ರ ತೊಂದರೆಯುಂಟು ಮಾಡಲಿದೆ ಎಂದು ಅದು ಹೇಳಿವೆ.

ಯು.ಎನ್.ಐ.ಸುದ್ದಿ, ಎ.13

★ ಹಾಲು ಉತ್ಪಾದಕರಿಗೆ ಯೋಗ್ಯದರ ಕೊಡಬೇಕು........ ಆದರೆ ಈ ಬಾರಿ 50 ಪೈಸೆ ಬೆಲೆಯೇರಿಕೆಯಲ್ಲಿ ಉತ್ಪಾದಕರಿಗೆ ಕೇವಲ 10 ಪೈಸೆ ಮಾತ್ರ ವರ್ಗಾವಣೆಯಾಗಲಿದೆ.

-ಪ್ರಜಾವಾಣಿ, ಎ. 14

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. RamachandraRao
Managing Editor : N. K. Upadhyaya